Office of the,
Joint Director
Local Audit circle, 4th
Floor,T.T.M.C.Building,
'A' Block,B.M.T.C.,
Shanthinagar,
Bangalore-560027.

ಕರ್ನಾಟಕ ಸರ್ಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಜಂಟಿ ನಿರ್ದೇಶಕರ ಕಚೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
4ನೇ ಮಹಡಿ,
ಟಿ.ಟಿ.ಎಂ.ಸಿ ಕಟ್ಟಡ,
'ಎ' ಬ್ಲಾಕ್, ಬಿ.ಎಂ.ಟಿ.ಸಿ,
ಶಾಂತಿನಗರ,
ಬೆಂಗಳೂರು-27.

ಸಂಖ್ಯೆ :ಸ್ಥಲೆಪವಬೆಂ:ಲೆಪವರದಿ:.2023-24/ 135 ದಿನಾಂಕ: 22-04-2024

ಸದಸ್ಯ ಕಾರ್ಯದರ್ಶಿ,
ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನಾ ಪ್ರಾಧಿಕಾರ
ನಗರ ಯೋಜನಾ ನಿರ್ದೇಶಕರ ಕಛೇರಿ
2ನೇ ಮಹಡಿ, ನಂ.5, ಲೂಪ್ ಲೈನ್
ರೇಸ್ ಕೋರ್ಸ್ ರಸ್ತೆ, ಗಾಂಧಿ ಸರ್ಕಲ್ ಹತ್ತಿರ
ಬೆಂಗಳೂರು-560009.

03/05/24

ಮಾನ್ಯರೆ,

ವಿಷಯ : 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸುವ ಬಗ್ಗೆ

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಕಛೇರಿಯ 2022-23ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಿ, ಸವಿವರ ಲೆಕ್ಕಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಅಡಕವಿರಿಸಿ ಕಳುಹಿಸಲಾಗಿದೆ. ವರದಿಯು ತಲುಪಿದ ಮೂರು ತಿಂಗಳೊಳಗಾಗಿ ಸೂಕ್ತ ಹಾಗೂ ಸಮರ್ಥನೀಯವಾದ ಅನುಪಾಲನಾ ಉತ್ತರವನ್ನು ಪೂರಕ ದಾಖಲಾತಿಗಳೊಂದಿಗೆ ಕಳುಹಿಸಿಕೊಡುವಂತೆ ಕೋರಿದೆ. ವರದಿಯನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ ಕಳುಹಿಸಿಕೊಡುವುದು.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಬೆಂಗಳೂರು.

ಬಿ. ಎಂ. ಐ. ಸಿ. ಪಿ. ಪಿ. ಎಂ., ಬೆಂಗಳೂರು
ಸಂಖ್ಯೆ: 537 ದಿನಾಂಕ: 03-07-24

ಪ್ರತಿಯನ್ನು:-

1) ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಯೋಜನಾ ಪ್ರಾಧಿಕಾರ, ಅಲಿ ಅಸ್ಕರ್ ರಸ್ತೆ, ಬೆಂಗಳೂರು.
2) ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ, 4 ನೇ ಮಹಡಿ, ವಿಕಾಸಸೌಧ, ಬೆಂಗಳೂರು-560001.
3) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು.
4) ಯೋಜನಾ ನಿರ್ದೇಶಕರು, ನಗರ ಯೋಜನೆ ಬಹುಮಹಡಿಗಳ ಕಟ್ಟಡ, ನೆಲಮಹಡಿ, ಅಂಬೇಡ್ಕರ್ ವೀಧಿ, ಗೇಟ್ ನಂ.4, ಬೆಂಗಳೂರು-560001.
5) ಕಛೇರಿ ಪ್ರತಿ.

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ, ಬೆಂಗಳೂರು ಸಂಸ್ಥೆಯ
2022–23ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದ
ಪ್ರಮುಖವಾದ ನ್ಯೂನತೆಗಳು ಹಾಗೂ ಆಕ್ಷೇಪಣೆ ಮತ್ತು ವಸೂಲಾತಿಯ ವಿವರಗಳು.

(ರೂ. ಗಳಲ್ಲಿ)

ಕ್ರ ಸಂ	ಕಂಡಿಕೆ ಸಂ.	ವಿವರಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	6	ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಗಳನ್ನು ಸಲ್ಲಿಸದಿರುವುದು.	–	–
2	10	ಆಯವ್ಯಯಕ್ಕೆ ಅನುಮೋದನೆ ಪಡೆದಿರುವುದು ಹಾಗೂ ವೆಚ್ಚ ಭರಿಸಿರುವುದು.	–	–
3	17	ವಾರ್ಷಿಕ ಲೆಕ್ಕ ಪತ್ರಗಳನ್ನು ಸಕಾಲದಲ್ಲಿ ಸಲ್ಲಿಸುವ ಕುರಿತು	–	–
4	18	ಆಡಳಿತಾತ್ಮಕ ವಾರ್ಷಿಕ ವರದಿಯನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸುವ ಕುರಿತು	–	–
5	29	ಸಂಗ್ರಹಣಾ ಶುಲ್ಕದಲ್ಲಿ ಶೇ.5ರ ಭಾಗವನ್ನು ಶುಲ್ಕದ ರೂಪದಲ್ಲಿ ಕರ್ನಾಟಕ ನಗರ ಯೋಜನಾ ಮಂಡಳಿ ವಂತಿಕೆ ನೀಡುವ ಕುರಿತು	3062470	–
6	30	ಸೆಸ್ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಕ್ರಮ ವಹಿಸುವುದು	11682671	–
7	43	ಲೆಕ್ಕ ಪರಿಶೋಧನಾ ಶುಲ್ಕ ಪಾವತಿಸಲು ಕ್ರಮ ವಹಿಸುವುದು	246418	–
ಒಟ್ಟು			**14991559**	–

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
(ಬಿ) ಬೆಂಗಳೂರು.

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ಸಂಸ್ಥೆಯ 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ಭಾಗ–1

1. ಪೀಠಿಕೆ:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಸಂಖ್ಯೆ: 11ರ ಪ್ರಕಾರ ಜಾರಿಗೆ ಬಂದಿದ್ದು, ಪ್ರಾಧಿಕಾರವು ಮೇಲ್ಕಂಡ ಕಾಯ್ದೆಯನ್ವಯ ದಿ: 05.10.1999 ರಿಂದ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದರ ಮೂಲ ಉದ್ದೇಶ ಕೈಗಾರಿಕಾ, ವಾಣಿಜ್ಯ ಹಾಗೂ ವಸತಿ ಕಟ್ಟಡಗಳಿಗೆ ವಿನ್ಯಾಸ ಮತ್ತು ಕಟ್ಟಡ ನಕ್ಷೆಗಳಿಗೆ, ವಸತಿ ವಿನ್ಯಾಸ ನಕ್ಷೆಗಳಿಗೆ ಹಾಗೂ ಭೂ ಉಪಯೋಗದ ಬದಲಾವಣೆಗಳಿಗೆ ಮಂಜೂರಾತಿ ನೀಡುವುದಾಗಿರುತ್ತದೆ.

ಬಿ.ಎಂ.ಐ.ಸಿ.ಎ.ಪಿ.ಎ ಯ ಕಾರ್ಯವ್ಯಾಪ್ತಿಯು ಬೆಂಗಳೂರು ರಾಮನಗರ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ 701.01 ಚ ಕಿ.ಮೀ ವ್ಯಾಪ್ತಿಯನ್ನು ಒಳಗೊಂಡಿದ್ದು ಇದರಲ್ಲಿ 111 ಕಿ.ಮೀ ತಡೆರಹಿತ ಹೆದ್ದಾರಿ, 43 ಕಿ.ಮೀ ಎಕ್ಸ್‌ಪ್ರೆಸ್ ರಸ್ತೆ 9.1 ಕಿ.ಮೀ ಲಿಂಕ್ ರಸ್ತೆಯು ಹಾಗೂ 3.1 ಕಿ.ಮೀ ಮೇಲು ರಸ್ತೆಗಳು ಸಹ ಸೇರಿರುತ್ತದೆ. ಇದರಲ್ಲಿ ಒಟ್ಟು 140 ಕಂದಾಯ ಗ್ರಾಮಗಳು ಮತ್ತು 54 ಭಾಗಶಃ ಗ್ರಾಮಗಳು ಹಾಗೂ ಮದ್ದೂರು, ಶ್ರೀರಂಗಪಟ್ಟಣ ಸಹ ಸೇರಿರುತ್ತದೆ.

ಕರ್ನಾಟಕ ಟೌನ್ ಮತ್ತು ಗ್ರಾಮಾಂತರ ಆಕ್ಟ್ 1961ರ ಸೆಕ್ಷನ್ 68 ಸಿ(2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗೆ 1965ರ ನಿಯಮ 23(1)ರಂತೆ ಬಿಎಂಐಸಿಎಪಿಎ ಯೋಜನಾ ಪ್ರಾಧಿಕಾರದ 2022–23ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ಅವಧಿಯು ದಿನಾಂಕ: 01.04.2022 ರಿಂದ 31.03.2023ರವರೆಗೆ ಒಳಗೊಂಡಿದೆ. ಲೆಕ್ಕ ಪರಶೋಧನೆಯಲ್ಲಿ ಕಂಡುಬಂದಿರುವ ಪ್ರಮುಖ ನ್ಯೂನತೆಗಳು ಹಾಗೂ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರಗಳನ್ನು ಕಂಡಿಕೆವಾರು ವಿವರಿಸಲಾಗಿದೆ. ಅವುಗಳಿಗೆ ಸೂಕ್ತವಾದ ಅನುಸರಣಾ ವರದಿಯನ್ನು ಸಕ್ಷಮ ಪ್ರಾಧಿಕಾರದ ಅಭಿಪ್ರಾಯದೊಂದಿಗೆ ನಿಗಧಿತ ಅವಧಿಯೊಳಗೆ ಸಲ್ಲಿಸಲು ಸೂಚಿಸಿದೆ.

2. ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ:–

ಬೆಂಗಳೂರು–ಮೈಸೂರು ನಡುವೆ ಮಹಾ ಹೆದ್ದಾರಿಯ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರವು ಮೆ॥ನೈಸ್ ಸಂಸ್ಥೆಗೆ ಅನುಮೋದನೆ ನೀಡಿದ್ದು, ಈ ಹೆದ್ದಾರಿ ಯೋಜನೆಯಂತೆ ಸದರಿ ರಸ್ತೆಯ ಪಂಕ್ತೀಕರಣದ ಆಸುಪಾಸಿನಲ್ಲಿ ಅಭಿವೃದ್ಧಿಗಳು ಉಂಟಾಗಬುಹುದೆಂದು ಸರ್ಕಾರವು ಮನಗಂಡು ಸದರಿ ಅಭಿವೃದ್ಧಿಗಳು ಯೋಜನಾ ಬದ್ಧವಾಗಿ ಬೆಳವಣಿಗೆಯಾಗಬೇಕೆಂಬ ಉದ್ದೇಶದಿಂದ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ)ರಂತೆ ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ377ಎಂಐಬಿ98, ದಿನಾಂಕ: 13.07.1999ರಲ್ಲಿ ಈ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿರುತ್ತದೆ ಹಾಗೂ ಕರ್ನಾಟದ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಾಯ್ದೆ 4(ಸಿ)ರಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:377:ಎಂಐಬಿ:98, ದಿನಾಂಕ: 05.10.1999ರಲ್ಲಿ ಯೋಜನಾ ಪ್ರಾಧಿಕಾರವನ್ನು ಸರ್ಕಾರವು ರಚಿಸಿರುತ್ತದೆ. ಸ್ಥಳೀಯ ಯೋಜನಾ ಪ್ರದೇಶವನ್ನು ಪರಿಷ್ಕರಿಸಿ ಸರ್ಕಾರವು ಆದೇಶ ಸಂಖ್ಯೆ: 130ಬೆಂರೂಪ್ರಾ2001, ದಿನಾಂಕ: 30.11.2001ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ. ಇದರ ಒಟ್ಟು ಕ್ಷೇತ್ರ 701.01ಚ.ಕಿ.ಮೀ ಇದ್ದು, ಈ ಕ್ಷೇತ್ರವು 140 ಪೂರ್ಣ ಕಂದಾಯ ಗ್ರಾಮಗಳು, 54 ಭಾಗಶಃ ಗ್ರಾಮಗಳು ಮತ್ತು ಮದ್ದೂರು ಪಟ್ಟಣವನ್ನು ಒಳಗೊಂಡಿರುತದೆ ಜೊತೆಗೆ ಯೋಜನೆಯಲ್ಲಿ ಬೆಂಗಳೂರಿನಿಂದ–ಮೈಸೂರಿನವರೆಗೆ 111ಕಿ.ಮೀ ಎಕ್ಸ್‌ಪ್ರೆಸ್ ವೇ, 41ಕಿ.ಮೀ ಪೆರಿಫರಲ್ ರಸ್ತೆ, 9.1ಕಿ.ಮೀ ಲಿಂಕ್ ರಸ್ತೆ, 3.1ಕಿ.ಮೀ

ಉದ್ದದ ಎಲಿವೇಟೆಡ್ ರಸ್ತೆ, 16 ಇಂಟರ್‌ಚೇಂಜಸ್ ಹಾಗೂ 05 ಹೊಸ ಟೌನ್‌ಶಿಪ್‌ಗಳ ನಿರ್ಮಾಣವು ಒಳಗೊಂಡಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ:75:ಬೆಂರೂಪ್ರಾ:2003, ದಿನಾಂಕ: 12.02.2004ರಂತೆ ಬಿಎಂಐಸಿಎಪಿಎ ವ್ಯಾಪ್ತಿಗೆ ಮಹಾಯೋಜನೆಯು ಸರ್ಕಾರದಿಂದ ಅನುಮೋದನೆ ಹೊಂದಿದೆ. ಯೋಜನಾ ಪ್ರದೇಶದೊಳಗಿನ ಯಾವುದೇ ಪ್ರದೇಶಗಳ ಭೂ ಉಪಯೋಗ ಬದಲಾವಣೆ ಹಾಗೂ ಅಭಿವೃದ್ಧಿಗಳ ಸಂಬಂಧ ಯೋಜನಾ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗಿದೆ.

(I) ಆಡಳಿತಾತ್ಮಕ ರಚನೆ:

ಬಿಎಂಐಸಿಎಪಿಎಯು ಅಧ್ಯಕ್ಷರು, ಸದಸ್ಯ–ಕಾರ್ಯದರ್ಶಿಗಳು, ಐವರು ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಯ ಪ್ರತಿನಿಧಿಗಳನ್ನೊಳಗೊಂಡು ಒಟ್ಟು 14 ಜನ ಸದಸ್ಯರನ್ನು ಒಳಗೊಂಡಿರುತ್ತದೆ ಹಾಗೂ ಪ್ರಾಧಿಕಾರಕ್ಕೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 4(ಸಿ) 3(iv)ರಂತೆ ಮೂವರು ಅಧಿಕಾರೇತರ ಸದಸ್ಯರನ್ನು ನೇಮಿಸಲು ಸರ್ಕಾರಕ್ಕೆ ಅಧಿಕಾರವಿರುತ್ತದೆ.

ಕ್ರ.ಸಂ.	ಹುದ್ದೆ	ಹೆಸರು	ಸರ್ಕಾರಿ ಆದೇಶದ ವಿವರ ಹಾಗೂ ದಿನಾಂಕ
1	ಅಧ್ಯಕ್ಷರು	ಶ್ರೀ. ಎಂ. ಜಯದೇವ್ (01.04.2022 ರಿಂದ 12.07.2022) ಶ್ರೀ. ರಾಕೇಶ್ ಸಿಂಗ್., ಐ.ಎ.ಎಸ್ (17.08.2022 ರಿಂದ 31.03.2023) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:129:ಮೈಅಪ್ರಾ:2020, ದಿನಾಂಕ: 27.11.2020
2	ಸದಸ್ಯರು	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:78:ಮೈಅಪ್ರಾ:2022(ಇ), ದಿನಾಂಕ: 22.02.2022
		ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
3	ಸದಸ್ಯರು	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
4	ಸದಸ್ಯರು	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
5	ಸದಸ್ಯರು	ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
6	ಸದಸ್ಯರು	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
7	ಸದಸ್ಯರು	ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008,

		ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ ಬೆಂಗಳೂರು	ದಿನಾಂಕ: 12.11.2008
8	ಸದಸ್ಯರು	ರಾಮನಗರ ಮುನಿಸಿಪಲ್ ಕಮಿಷನರ್, ರಾಮನಗರ, ರಾಮನಗರ ಜಿಲ್ಲೆ	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
9	ಸದಸ್ಯರು (ಸ್ಥಳೀಯ ಸಂಸ್ಥೆಯ ಪ್ರತಿನಿಧಿ)	ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
10	ಸದಸ್ಯರು (ಸ್ಥಳೀಯ ಸಂಸ್ಥೆಯ ಪ್ರತಿನಿಧಿ)	ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
11	ಸದಸ್ಯರು (ಸ್ಥಳೀಯ ಸಂಸ್ಥೆಯ ಪ್ರತಿನಿಧಿ)	ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
12	ಸದಸ್ಯರು (ಸ್ಥಳೀಯ ಸಂಸ್ಥೆಯ ಪ್ರತಿನಿಧಿ)	ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
13	ಸದಸ್ಯ ಕಾರ್ಯದರ್ಶಿ	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಬಿಎಂಐಸಿಎಪಿಎ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:157:ನಯೋಸೇ:2008, ದಿನಾಂಕ: 13.11.2008
14	ಸದಸ್ಯರು	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:05:ಬೆಂರೂಪ್ರಾ:2008, ದಿನಾಂಕ: 12.11.2008
ವಿಶೇಷ ಆಹ್ವಾನಿತರು			
1	ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.		
2	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸಸೌಧ		
3	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.		
4	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.		
5	ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.		

3) ಕಾರ್ಯಚಟುವಟಿಕೆ ಮತ್ತು ಕರ್ತವ್ಯಗಳ ವಿವರ:

ಪ್ರಾಧಿಕಾರವು ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅದರಂತೆ ಈ ಕೆಳಕಂಡ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.

(ಅ) ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಮಹಾಯೋಜನೆ ತಯಾರಿಸುವುದು.

(ಆ) ಮಹಾಯೋಜನೆಯಂತೆ ಹಾಗೂ ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಅಭಿವೃದ್ಧಿಗಳನ್ನು/ಬೆಳವಣಿಗೆಗಳನ್ನು ನಿಯಂತ್ರಿಸುವುದು. ಇದರಲ್ಲಿ ಕಟ್ಟಡ ನಿರ್ಮಾಣ ಭೂ ಅಭಿವೃದ್ಧಿ ಅನುಮೋದನೆ ನೀಡುವುದು ಸಹ ಒಳಗೊಂಡಿದೆ.

(ಇ) ಮಹಾಯೋಜನೆಯ ನಕ್ಷೆ ಹಾಗೂ ವಲಯ ನಿಯಮಾವಳಿಯನ್ವಯ ಕೃಷಿ ಭೂಮಿಗಳನ್ನು ಭೂ

ಪರಿವರ್ತನೆ ಮಾಡಲು ಕಂದಾಯ ಇಲಾಖೆಗೆ ನಿಯಮಾನುಸಾರ ತಾಂತ್ರಿಕ ಅಭಿಪ್ರಾಯ ನೀಡುವುದು.

(ಈ) ಸ್ಥಳೀಯ ಯೋಜನಾ ಪ್ರದೇಶದೊಳಗೆ ನಗರ ಯೋಜನಾ (Town Planning Scheme) ಯೋಜನೆಗಳ ಮುಖೇನ ಮಹಾಯೋಜನೆಯನ್ನು ಜಾರಿಗೊಳಿಸುವುದು.

(ಉ) ಯೋಜನಾ ಪ್ರದೇಶದಲ್ಲಿ ಉದ್ದೇಶಗಳಿಗಾಗಿ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ ಪ್ರದೇಶಗಳನ್ನು ಭೂಸ್ವಾಧೀನ ಮಾಡುವುದು (ಉದ್ಯಾನವನ)

(ಊ) ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಭೂಪರಿವರ್ತಿತ ಜಮೀನುಗಳಿಗೆ ಭೂಮಾಲೀಕರ ಕೋರಿಕೆಯ ಮೇರೆಗೆ ವಿನ್ಯಾಸ ನಕ್ಷೆಗೆ ನಿಯಮಗಳಡಿಯಲ್ಲಿ ತಾಂತ್ರಿಕ ಅನುಮೋದನೆ ನೀಡುವುದು.

(1) ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿರುವ ಮಾದರಿಗಳು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿ ಬಿಎಂಐಸಿಎಪಿಎಯು ಕಾರ್ಯನಿರ್ವಹಿಸುತ್ತಿದೆ. ಸರ್ಕಾರದಿಂದ ಅನುಮೋದನೆ ಹೊಂದಿರುವ ಮಹಾಯೋಜನೆ, ವಲಯನಿಯಮಾವಳಿ, ವಿವಿಧ ಕಾಯ್ದೆಗಳಡಿ ಇರುವ ಅವಕಾಶಗಳು, ಸರ್ಕಾರದ ಆದೇಶ, ಸುತ್ತೋಲೆಗಳು ಹಾಗೂ ಆಗಿಂದಾಗ್ಗೆ ಸರ್ಕಾರದಿಂದ ನೀಡಲಾಗುವ ನಿರ್ದೇಶನ/ಮಾರ್ಗಸೂಚಿಗಳನ್ನು ಅನುಸರಿಸಿ ಬಿಎಂಐಸಿಎಪಿಎಯು ಕಾರ್ಯನಿರ್ವಹಿಸುತ್ತಿದೆ.

(2). ನಿರ್ಣಯ ತೆಗೆದುಕೊಳ್ಳುವಲ್ಲಿ ಅನುಸರಿಸುತ್ತಿರುವ ಕಾರ್ಯ ವಿಧಾನ ಮತ್ತು ಮೇಲ್ಮಿಚಾರಣೆ ಹಾಗೂ ಹೊಣೆಗಾರಿಕೆ ವಿವರಗಳು:-

ಕಛೇರಿಯಲ್ಲಿನ ತಾಂತ್ರಿಕ ವಿಷಯ ನಿರ್ವಾಹಕರುಗಳಾದ ನಗರ ಯೋಜಕರು ಮತ್ತು ಸಹಾಯಕ ನಗರ ಯೋಜಕರು ಕಛೇರಿಯಲ್ಲಿ ಸಾರ್ವಜನಿಕರಿಂದ ಹಾಗೂ ವಿವಿಧ ಕಛೇರಿಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕಡತದೊಡನೆ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳ ಮುಖೇನ ವಿಷಯ ಮಂಡಿಸುತ್ತಾರೆ. ತದನಂತರ, ಕ್ರಮವಾಗಿ ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು ತಮ್ಮ ಹಂತದಲ್ಲಿ ಪ್ರಸ್ತಾವನೆಯ ಬಗ್ಗೆ ಪರಿಶೀಲಿಸಿ, ಸೂಕ್ತವಾದ ಆದೇಶಕ್ಕಾಗಿ ಕಛೇರಿಯ ಮುಖ್ಯಸ್ಥರಾದ ಸದಸ್ಯ-ಕಾರ್ಯದರ್ಶಿಗಳಿಗೆ ಕಡತ ಮಂಡಿಸುತ್ತಾರೆ. ಸದಸ್ಯ-ಕಾರ್ಯದರ್ಶಿಗಳು ಪ್ರಸ್ತಾವನೆಯ ಬಗ್ಗೆ ಪರಿಶೀಲಿಸಿ, ಕಾಯ್ದೆಯಂತೆ ಅವಕಾಶವಿದ್ದಲ್ಲಿ ಪ್ರಾಧಿಕಾರದಿಂದ ಪ್ರತ್ಯಾಯೋಜನೆಗೊಂಡಿದ್ದಲ್ಲಿ ಅಂತಹ ಪ್ರಕರಣಗಳನ್ನು ನಿಯಮಾನುಸಾರ ಕ್ರಮವಹಿಸಿ ವಿಲೇವಾರಿ ಮಾಡಲಾಗುತ್ತದೆ. ಕಾಯ್ದೆಯಂತೆ ಪ್ರಾಧಿಕಾರದ ಸಭೆಗೆ ಸಭಾ ನಿರ್ಣಯಕ್ಕಾಗಿ ಮಂಡಿಸಬೇಕಾಗುವ ಕಡತಗಳಿದ್ದಲ್ಲಿ ಅಂತಹ ಕಡತಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ, ಪ್ರಾಧಿಕಾರದ ಸಭಾ ನಿರ್ಣಯದೊಡನೆ ಕಾಯ್ದೆಯ ಅವಕಾಶದಂತೆ ಹಾಗೂ ನಿಯಮಾನುಸಾರ ಅಂತಹ ಪ್ರಕರಣಗಳಲ್ಲಿ ಕ್ರಮವಹಿಸಲಾಗುತ್ತದೆ.

(3) ಮಹಾಯೋಜನೆ ತಯಾರಿಕೆ:

ಬಿಎಂಐಸಿಎಪಿಎ ಸ್ಥಳೀಯ ಯೋಜನ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಯನ್ನು ಸರ್ಕಾರವು ಆದೇಶ ಸಂಖ್ಯೆ: ನಅಇ75ಬೆಂರೂಪ್ರಾ2003, ಬೆಂಗಳೂರು, ದಿನಾಂಕ: 12.02.2004ರಲ್ಲಿ ಅಂತಿಮ ಅನುಮೋದನೆ ನೀಡಿದೆ. ಕೆಟಿಸಿಪಿ ಕಾಯ್ದೆ ಕಲಂ 13(4) ಮತ್ತು ಯೋಜನಾ ಪ್ರಾಧಿಕಾರಗಳ ನಿಯಮಗಳು 1969ರ, ನಿಯಮ 33ರಡಿಯಲ್ಲಿ ದಿನಾಂ: 07.10.2004ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ದಿನಾಂಕ: 27.05.2006ರಂದು ಜರುಗಿದ ಪ್ರಾಧಿಕಾರದ 12ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 12.6ರ ತೀರ್ಮಾನದಂತೆ ಮಹಾಯೋಜನೆ ಪರಿಷ್ಕರಿಸಲು ತೀರ್ಮಾನಿಸಿದ್ದು, ಅದರಂತೆ ಇತ್ತೀಚಿನ ಬೆಳವಣಿಗೆಗಳನ್ನು ಅಳವಡಿಸಿಕೊಂಡು, ಎನ್.ಆರ್.ಎಸ್.ಸಿ, ಹೈದರಾಬಾದ್ ಸಂಸ್ಥೆಯಿಂದ ಪಡೆದ QB-Data ಹಾಗೂ ಅಗತ್ಯ ದಾಖಲೆಗಳೊಂದಿಗೆ ಮಹಾಯೋಜನೆಯನ್ನು ಪರಿಷ್ಕರಿಸುವ ಕಾರ್ಯವನ್ನು ಮೆ॥ ಕ್ಯೂರಿಪ್ ಸಂಸ್ಥೆಗೆ ವಹಿಸಲಾಗಿರುತ್ತದೆ. ಸದರಿ ಮಾಹಿತಿಗಳ ಆಧಾರದ ಮೇಲೆ ಮೆ॥ ಕ್ಯೂರಿಪ್ ಸಂಸ್ಥೆಯು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮೂಲ ನಕ್ಷೆಯನ್ನು ತಯಾರಿಸಿ ಸಲ್ಲಿಸಿರುತ್ತದೆ. ಸದರಿ ನಕ್ಷೆಯಲ್ಲಿ ಲಿಂಕ್, ಪೆರಿಫೆರಲ್ ರಸ್ತೆ ಹಾಗೂ ಎಕ್ಸ್‌ಪ್ರೆಸ್ ವೇಗಳನ್ನು ಅಳವಡಿಸಿರುವುದು ಸರಿ ಇದೆಯೇ ಎಂಬ ಬಗ್ಗೆ ಲೋಕೋಪಯೋಗಿ ಇಲಾಖೆಯ ಪರಿಶೀಲನೆಗೆ ನೀಡಲಾಗಿರುತ್ತದೆ. ದಿನಾಂಕ: 21.01.2011ರಂದು ನಡೆದ ಪ್ರಾಧಿಕಾರದ 28ನೇ ಸಾಮಾನ್ಯ ಸಭೆಯ ತೀರ್ಮಾನದಂತೆ ಮೂಲ ನಕ್ಷೆ ಗುಣಮಟ್ಟ ಮತ್ತು ನಿಖರತೆ ಪರಿಶೀಲನೆಗೆ ಸಹ ಒಳಪಡಿಸಲಾಗಿರುತ್ತದೆ.

ಪರಿಶೀಲನೆಗಾಗಿ ಸಲ್ಲಿಸಿರುವ ಮೂಲ ನಕ್ಷೆಯನ್ನು ಅಂತಿಮಗೊಳಿಸುವ ಸಂಬಂಧ, ಬಿಎಂಐಸಿ ಯೋಜನೆಯಲ್ಲಿ ಬರುವ ಸಂಪೂರ್ಣ ಜಮೀನುಗಳ ವಿಸ್ತೀರ್ಣ, ಸರ್ವೆ ಸಂಖ್ಯೆಗಳ ವಿವರ, ಗಡಿ, ಗ್ರಾಮಗಳನ್ನು ಗುರುತಿಸಿರುವ 1:5000 ಅಳತೆಗೆ ತಯಾರಿಸಿರುವ ನಕ್ಷೆ, ಸಂಪೂರ್ಣ ವಿಸ್ತೀರ್ಣದಲ್ಲಿ ಉದ್ದೇಶಿಸಿರುವ ಯೋಜನೆಯ ಭಾಗಗಳಾದ ಲಿಂಕ್ ರಸ್ತೆ, ಫೆರಿಫರಲ್ ರಸ್ತೆ, ಎಕ್ಸ್‌ಪ್ರೆಸ್ ವೇ, ಟೌನ್‌ಶಿಪ್ಸ್, ಇಂಟರ್‌ಚೇಂಜಸ್, ಟೋಲ್ ಪ್ಲಾಜಾ ಇತ್ಯಾದಿ ವಿವರಗಳನ್ನು (ಸರ್ವೆ ನಂಬರ್ ವಿವರಗಳು ಸೇರಿದಂತೆ) ತೋರಿಸುವ ನಕ್ಷೆ, ಲಿಂಕ್ ರಸ್ತೆ ಮತ್ತು ಫೆರಿಫೆರಲ್ ರಸ್ತೆಗೆ ಹೊಂದಿಕೊಂಡಂತೆ ಮೆ॥ ನೈಸಲ್ ಸಂಸ್ಥೆಗೆ ನೀಡಲಾಗಿರುವ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಹಾಗೂ ಯಾವ ಉಪಯೋಗಕ್ಕೆ ಉಪಯೋಗಿಸಬಹುದು ಎಂಬ ಬಗ್ಗೆ ಮಾಹಿತಿ, ನಕ್ಷೆ, ಟೌನ್‌ಶಿಪ್‌ಗಳಲ್ಲಿ ಸೇರುವ ಜಮೀನುಗಳ ಸರ್ವೆ ನಂ. ಗ್ರಾಮಗಳ ವಿವರಗಳನ್ನು ಲೋಕೋಪಯೋಗಿ ಇಲಾಖೆಯಿಂದ ದಿನಾಂಕ: 09.01.2019ರಂದು ಕೋರಲಾಗಿದ್ದು, ಈವರೆವಿಗೂ ಸ್ವೀಕೃತವಾಗಿರುವುದಿಲ್ಲ.

ಮಹಾಯೋಜನೆ ತಯಾರಿಸಿ 16 ವರ್ಷ ಮುಗಿದಿದ್ದು, ಲೋಕೋಪಯೋಗಿ ಇಲಾಖೆಯಿಂದ ಪರಿಷ್ಕರಣೆಗೆ ಅವಶ್ಯವಿರುವ ಮಾಹಿತಿಯು ಸ್ವೀಕೃತವಾಗಿಲ್ಲದಿರುವುದರಿಂದ, ಲೋಕೋಪಯೋಗಿ ಇಲಾಖೆ, ಕೆಐಎಡಿಬಿಯವರು ಒಳಗೊಂಡಂತೆ ಸಭೆ ಕರೆದು, ಮಹಾಯೋಜನೆಗೆ ಅವಶ್ಯಕವಾದ ನಕ್ಷೆ, ರಸ್ತೆ ಪಂಕ್ತೀಕರಣದ ವಿವರಗಳನ್ನು ಕೆಐಎಡಿಬಿ, ಲೋಕೋಪಯೋಗಿ ಇಲಾಖೆಯಿಂದ ವಿಳಂಭಕ್ಕೆ ಆಸ್ಪದವಿಲ್ಲದಂತೆ ಕೂಡಲೇ ಒದಗಿಸುವಂತೆ ನಿರ್ದೇಶನ ನೀಡಲು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆಯಲಾಗಿದ್ದು, ಸರ್ಕಾರವು ಬಿಎಂಐಸಿ ಯೋಜನೆಯ ಅಲೈನ್‌ಮೆಂಟ್ ಬಗ್ಗೆ ವಿಧಾನಸಭೆಯ ಸದನ ಸಮಿತಿ ತನಿಖೆ ಮಾಡುತ್ತಿರುವುದರಿಂದ, ಸದರಿ ಸಮಿತಿಯ ವರದಿಯು ಬಂದ ನಂತರ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದೆ. ಈ ಮಧ್ಯೆ ದಿನಾಂಕ:24.09.2016ರಂದು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಸಭೆಯ ನಿರ್ಣಯದಂತೆ ಹಾಲಿ ಅಭಿವೃದ್ಧಿಯಂತೆ ಹಾಗೂ ಫ್ರೇಮ್ವರ್ಕ್ ಅಗ್ರಿಮೆಂಟ್ನಂತೆ ರಸ್ತೆ ಪರಿಚಲನೆಯನ್ನು ಲೋಕೋಪಯೋಗಿ ಇಲಾಖೆಯು ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ನೀಡಬೇಕಾಗಿರುತ್ತದೆ. ಈ ಸಂಬಂಧ ಈ ಕಛೇರಿಯಿಂದ ಲೋಕೋಪಯೋಗಿ ಇಲಾಖೆಗೆ ಪತ್ರ ಸಹ ಬರೆಯಲಾಗಿದೆ. ಆದರೆ ಈವರೆವಿಗೂ ಸಭೆಯ ನಿರ್ಣಯದಂತೆ ಲೋಕೋಪಯೋಗಿ ಇಲಾಖೆಯಿಂದ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ, ಈವರೆವಿಗೂ ಮೂಲ ನಕ್ಷೆಯನ್ನು ಅಂತಿಮಗೊಳಿಸಿರುವುದಿಲ್ಲ.

ಇದೇ ವಿಷಯದ ಸಂಬಂಧ ದಿನಾಂಕ: 01.02.2019ರ ಪ್ರಾಧಿಕಾರದ 62ನೇ ಸಭೆಯ ವಿಷಯ ಸಂಖ್ಯೆ: 20ರಲ್ಲಿ ಚರ್ಚಿಸಲಾಗಿದೆ.

ಮಹಾಯೋಜನೆಯ ಪರಿಷ್ಕರಣೆ ಸಂಬಂಧ ಹಾಲಿ ಅಭಿವೃದ್ಧಿಪಡಿಸಿರುವ ಪೆರಿಫರಲ್ ರಸ್ತೆ ಮತ್ತು ಲಿಂಕ್ ರಸ್ತೆ ಹಾಗೂ ಪೂರ್ಣ ಎಕ್ಸ್ ಪ್ರೆಸ್ ವೇ ರಸ್ತೆ ಪರಿಚಲನೆ ಹಾಗೂ ಬಿಎಂಐಸಿಪಿ ಯೋಜನೆಯ ಪೂರ್ಣ ವಿವರದ ಬಗ್ಗೆ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಂದ ಕೋರಿರುವ ಮಾಹಿತಿಯು ಈವರೆಗೂ ಸ್ವೀಕೃತವಾಗಿರುವುದಿಲ್ಲದಿರುವುದರಿಂದ, ಮಹಾಯೋಜನೆ ಪರಿಷ್ಕರಣೆ ಕಾರ್ಯ ವಿಳಂಬವಾಗಿರುವ ಅಂಶವನ್ನು ಸಭೆಯು ಗಮನಿಸಿತು. ಮೆ॥ ಕ್ಯೂರಿಪ್ ಸಂಸ್ಥೆಯೊಡನೆ ದಿನಾಂಕ: 19.08.2009ರಲ್ಲಿ ಮಾಡಿಕೊಂಡಿರುವ ಒಪ್ಪಂದದಂತೆ ದಿನಾಂಕ: 25.02.2011ಕ್ಕೆ ಮಹಾಯೋಜನಾ ತಯಾರಿಕೆ ಅಂತ್ಯಗೊಳ್ಳಬೇಕಾಗಿತ್ತು.

ಅಲ್ಲದೇ, ಬಿಎಂಐಸಿಪಿ ಯೋಜನೆಯ ಕುರಿತು ಪೂರ್ಣ ವಿವರಗಳು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಂದ ಮಾಹಿತಿ ಸ್ವೀಕೃತವಾಗುವವರೆಗೆ ಮಹಾಯೋಜನೆ ಪರಿಷ್ಕರಣೆ ಕಾರ್ಯ ಮುಂದುವರೆಸಲು ಅಸಾಧ್ಯವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆ ಕಾರ್ಯವನ್ನು ಸ್ಥಗಿತಗೊಳಿಸುವುದು ಸೂಕ್ತ ಎಂದು ಹಾಗೂ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಂದ ಕೋರಿರುವ ಮಾಹಿತಿ ಸ್ವೀಕೃತಗೊಂಡ ನಂತರ, ಮಹಾಯೋಜನೆ ಪರಿಷ್ಕರಣೆ ಕಾರ್ಯ ಮುಂದುವರೆಸುವುದು ಸೂಕ್ತ ಎಂದು ಸಭೆಯು ಅಭಿಪ್ರಾಯಿಸಿತು.

ಮೆ॥ ಕ್ಯೂರಿಪ್ ಸಂಸ್ಥೆಯೊಡನೆ ದಿನಾಂಕ: 19.08.2009ರಲ್ಲಿ ಮಾಡಿಕೊಂಡಿರುವ ಒಪ್ಪಂದದಂತೆ ದಿನಾಂಕ: 25.02.2011ಕ್ಕೆ ಮಹಾಯೋಜನಾ ತಯಾರಿಕೆ ಅಂತ್ಯಗೊಳ್ಳಬೇಕಾಗಿತ್ತು. ಆದರೆ, ಈವರೆಗೆ ನಮೂದಿಸಿರುವ ಕಾರಣಗಳಿಂದ ಮಹಾಯೋಜನೆ ಪರಿಷ್ಕರಣೆ ವಿಳಂಭವಾಗಿರುವುದರಿಂದ, ಮಹಾಯೋಜನೆ ಸಂಬಂಧ ಹೊಸದಾಗಿಯೇ ಮೂಲ ನಕ್ಷೆ ತಯಾರಿಸಿ ಮಾಹಿತಿಗಳನ್ನು ಸಂಗ್ರಹಿಸುವ ಅಗತ್ಯವಿರುವುದರಿಂದ, ಮೆ॥ ಕ್ಯೂರಿಪ್ ಸಂಸ್ಥೆಯೊಡನೆ ದಿನಾಂಕ: 19.08.2009ರಲ್ಲಿ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಗೊಳಿಸುವುದು ಸೂಕ್ತವಿದೆ ಎಂದೂ ಸಹ ಸಭೆಯು ಅಭಿಪ್ರಾಯಿಸಿತು.

ಪ್ರಾಧಿಕಾರದ ಸಭೆಯ ಮೇಲ್ಕಂಡ ಅಭಿಪ್ರಾಯಗಳನ್ನು ಉಲ್ಲೇಖಿಸಿ ಸರ್ಕಾರದ ಗಮನಕ್ಕೆ ತರುವಂತೆ ಹಾಗೂ ಮಹಾಯೋಜನೆ ಪರಿಷ್ಕರಣೆ ಸಂಬಂಧ ಮೆ॥ ಕ್ಯೂರಿಪ್ ಸಂಸ್ಥೆಯೊಡನೆ ದಿನಾಂಕ: 19.08.2009ರಲ್ಲಿ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಗೊಳಿಸುವುದು ಸೂಕ್ತವಾಗಿರುವುದರಿಂದ, ಸರ್ಕಾರಕ್ಕೆ ಈ ಬಗ್ಗೆ ಪತ್ರ ಬರೆದು ಸೂಕ್ತ ಆದೇಶವನ್ನು ಪಡೆದು ರದ್ದುಪಡಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಪ್ರಾಧಿಕಾರದ ಸಭಾ ನಿರ್ಣಯದಂತೆ ಮೇಲ್ಕಂಡ ಅಂಶಗಳನ್ನು ಸರ್ಕಾರದ ಅವಗಾಹನೆಗಾಗಿ ತರುತ್ತಾ, ಮಹಾಯೋಜನೆ ಪರಿಷ್ಕರಣೆ ಸಂಬಂಧ ಮುಂದುವರೆಸಲು ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸಾಧ್ಯವಾಗುತ್ತಿಲ್ಲವಾದ್ದರಿಂದ ಪ್ರಾಧಿಕಾರದಿಂದ ಮೆ॥ ಕ್ಯೂರಿಪ್ ರವರೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ಸಭಾ ನಿರ್ಣಯದಂತೆ ರದ್ದುಪಡಿಸುವ ಸಂಬಂಧ ಸೂಕ್ತ ಆದೇಶ ನೀಡುವ ಬಗ್ಗೆ ದಿನಾಂಕ: 07.03.2019ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ದಿನಾಂಕ:20.01.2020ರಂದು ಜರುಗಿದ ಪ್ರಾಧಿಕಾರದ 64ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ: IX(6)ರಲ್ಲಿ ದಿನಾಂಕ:12.02.2004ರಂದು ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ಮಹಾಯೋಜನೆಯನ್ನು ಪರಿಷ್ಕರಿಸುವ ಕುರಿತು ಸಭೆಯಲ್ಲಿ ಮಂಡಿಸಲಾದ ಎಲ್ಲಾ ಅಂಶಗಳ ಕುರಿತು ವಿವರವಾಗಿ

ಚರ್ಚಿಸಲಾಗಿ, ಮಹಾಯೋಜನೆಯ ಯೋಜನಾ ಅವಧಿಯು 2021ಕ್ಕೆ ಪೂರ್ಣಗೊಳ್ಳುವುದರಿಂದ, ಉಳಿದ ಮಹಾಯೋಜನೆಯ ಪರಿಷ್ಕರಣೆ ತಯಾರಿಸುವ ಪ್ರಕ್ರಿಯೆಯನ್ನು ಆರಂಭಿಸಲು ಸದಸ್ಯ-ಕಾರ್ಯದರ್ಶಿರವರಿಗೆ ನಿರ್ದೇಶನ ನೀಡಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಸದರಿ 64ನೇ ಸಾಮಾನ್ಯ ಸಭೆಯ ತೀರ್ಮಾನದಂತೆ ಮಹಾಯೋಜನೆಯ ಪರಿಷ್ಕರಣೆ ಕಾರ್ಯವನ್ನು ಕೈಗೊಳ್ಳಲು ಪರಿಣಿತ ಗುತ್ತಿಗೆದಾರರ ಮೂಲಕ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಹೊರಗುತ್ತಿಗೆ ಪಡೆಯಲು ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಬೇಕಾಗಿರುತ್ತದೆ. ಆದರೆ, ಪ್ರಾಧಿಕಾರವು ಈ ಹಿಂದೆ ಮೆ॥ ಕ್ಯೂರಿಪ್ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನುರದ್ದುಪಡಿಸಲು ಸೂಕ್ತ ಆದೇಶವಾಗದೇ ಇದ್ದುದ್ದರಿಂದ ಪ್ರಾಧಿಕಾರದಿಂದ ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಲು ಸಾಧ್ಯವಾಗುತ್ತಿಲ್ಲ ಹಾಗಾಗಿ, ಪ್ರಾಧಿಕಾರದಿಂದ ಮೆ॥ ಕ್ಯೂರಿಪ್ ರವರೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸುವ ಕುರಿತು ಸೂಕ್ತ ಆದೇಶಕ್ಕಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರಿಗೆ ದಿನಾಂಕ: 22.05.2020ರಂದು ಪತ್ರ ಬರೆಯಲಾಗಿದೆ.

ನಂತರ ಸರ್ಕಾರದ ಪತ್ರ ಸಂಖ್ಯೆ: ನಅಇ 114 ಮೈಅಪ್ರಾ 2019 (ಇ-ಕಡತ) ದಿನಾಂಕ: 05.09.2020ರಲ್ಲಿ ದಿನಾಂಕ: 16.06.2020ರಂದು ಮಹಾಯೋಜನೆ ಪರಿಷ್ಕರಣೆ ಕುರಿತು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಮೆ॥ ಕ್ಯೂರಿಪ್ ಸಂಸ್ಥೆಯೊಡನೆ ಮಾಡಿಕೊಂಡಿರುವ Contract Agreementನಲ್ಲಿನ ಅವಕಾಶದಂತೆ ಕಾನೂನಾತ್ಮಕ ಅಂಶಗಳನ್ನು ಪರಿಶೀಲಿಸಿಕೊಂಡು ಒಪ್ಪಂದವನ್ನು ರದ್ದುಪಡಿಸುವ ಬಗ್ಗೆ ಪ್ರಾಧಿಕಾರದಿಂದ ಕ್ರಮವಹಿಸುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿರುತ್ತದೆ.

ಸರ್ಕಾರದ ಅಭಿಪ್ರಾಯದಂತೆ ಕ್ರಮವಹಿಸುವ ಕುರಿತು ಮೆ॥ ಕ್ಯೂರಿಪ್ ಸಂಸ್ಥೆಯೊಡನೆ ಮಾಡಿಕೊಂಡಿರುವ ಕರಾರು ಒಡಂಬಡಿಕೆ ಒಪ್ಪಂದವನ್ನು ರದ್ದುಪಡಿಸುವ ಬಗ್ಗೆ ಅಭಿಪ್ರಾಯವೇನಾದರು ಇದ್ದಲ್ಲಿ ಸಲ್ಲಿಸುವಂತೆ ಸದರಿ ಸಂಸ್ಥೆಗೆ ದಿನಾಂಕ: 30.09.2020ರಂದು ಪತ್ರ ಬರೆಯಲಾಗಿರುತ್ತದೆ. ನಂತರ ಮೆ॥ ಕ್ಯೂರಿಪ್ ಸಂಸ್ಥೆಯವರು ಮಹಾಯೋಜನೆ ತಯಾರಿಕೆ ಕುರಿತು ರಸ್ತೆ ಪಂಕ್ತೀಕರಣವನ್ನು ನೀಡದೇ ಇರುವುದರಿಂದ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸುತ್ತಾ, ರಸ್ತೆ ಪಂಕ್ತೀಕರಣವನ್ನು ಒದಗಿಸಿದ್ದಲ್ಲಿ ಪ್ರಸ್ತಾವನೆಯನ್ನು ಮುಂದುವರೆಸಿ ಯೋಜನೆಯನ್ನು ಪೂರ್ಣಗೊಳಿಸುವುದಾಗಿ ಅಥವಾ ಓಡಿಪಿ ಯಲ್ಲಿರುವ ರಸ್ತೆ ಪಂಕ್ತೀಕರಣವನ್ನು ಅಳವಡಿಸಿಕೊಂಡು ಮಹಾಯೋಜನೆ ತಯಾರಿಸಲು ಸೂಚನೆ ನೀಡಿದ್ದಲ್ಲಿ ಮಹಾಯೋಜನೆಯನ್ನು ಪೂರ್ಣಮಾಡುವುದಾಗಿ ತಿಳಿಸಿರುತ್ತಾರೆ. ಸದರಿ ಅಂಶಗಳನ್ನು ದಿನಾಂಕ: 18.11.2020ರಂದು ಸರ್ಕಾರದ ಅವಗಾಹನೆಗೆ ಸಲ್ಲಿಸಲಾಗಿದೆ.

4. ಲೆಕ್ಕ ತಪಾಸಣಾ ತಂಡದ ವಿವರ :

ಸಂಸ್ಥೆಯ ಹೆಸರು	ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ಬೆಂಗಳೂರು
ಲೆಕ್ಕಪರಿಶೋಧಕರುಗಳ ಹೆಸರು	1. ಶ್ರೀ. ರಾಘವೇಂದ್ರ. ಆರ್. ಲೆ.ಪ. 2. ಶ್ರೀಮತಿ. ಲತಾ ಆರ್. ಲೆ.ಪ.

ಲೆಕ್ಕ ತಪಾಸಣೆ ಪ್ರಾರಂಭ ದಿನಾಂಕ	22.11.2023
ಲೆಕ್ಕ ತಪಾಸಣೆ ಮುಕ್ತಾಯ ದಿನಾಂಕ	24.11.2023
ಉಪಯೋಗಿಸಿದ ಮಾನವ ದಿನಗಳು	06 ಏಕ ಮಾನವ ದಿನಗಳು
ಕರಡು ವರದಿಯ ಪುನರ್ ಪರಿಶೀಲನಾ ಅಧಿಕಾರಿಗಳ ಹೆಸರು :	ಶ್ರೀ ನಾಗರಾಜ ಶೇರೆಗಾರ್, ಕೆ.ಎಸ್.ಎ.ಎಸ್., ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ.
ಪುನರ್ ಪರಿಶೀಲನಾ ದಿನಾಂಕ	17-04-2024

5. ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವರ್ಗದ ವಿವರ :-

2022-23ನೇ ಸಾಲಿನ ಪ್ರಾಧಿಕಾರದ ಆಡಳಿತ ವರ್ಗದ ವಿವರಣೆ.

ಕ್ರ.ಸಂ	ಪದನಾಮ	ಹೆಸರು	ದಿನಾಂಕ	
			ರಿಂದ	ವರೆಗೆ
1	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು	ಶ್ರೀ ಎಸ್.ಎಲ್. ರಾಜಣ್ಣ	01.04.2022	31-03-2023
2	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	ಶ್ರೀ. ಮಂಜಪ್ಪ	01.04.2022	31.03.2023
3	ನಗರ ಮತ್ತು ಯೋಜನಾ ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು.	ಶ್ರೀ.ಶೇಷ .ಆರ್ ಶ್ರೀ. ಶಿವರಾಮು. ಕೆ.ಪಿ ಶ್ರೀ ಲಸುಮನಾಯ್ಕ. ಸಿ.	01.04.2022 01.06.2022 08.07.2022	31.05.2022 31.03.2023 31.03.2023
4	ನಗರ ಮತ್ತು ಯೋಜನಾ ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	ಶ್ರೀಮತಿ ಲಲಿತಾ ನಾಯಕ್ ಶ್ರೀಮತಿ ಬವಿತಾ ಆರ್.ಬಿ ಶ್ರೀಮತಿ. ಓ. ಜಾನಕಿ ಶ್ರೀಮತಿ ಅರುಂಧತಿ. ಎಂ.ವಿ.	01.04.2022 01.04.2022 25.04.2022 04.02.203	31.03.2023 31.03.2023 31.03.2023 31.03.2023
5	ನಗರ ಮತ್ತು ಗ್ರಾಮಾಂತರ ಯೋಜನಾ ನಗರ ಯೋಜಕರು	ಶ್ರೀ ಪ್ರವೀಣ್ ಪಾಟೀಲ್ ಕು॥ ಸುಮ.ಕೆ. ಕು॥ ರಮ್ಯ. ಬಿ.ಎ.	01.04.2022 01.08.2022 18.07.2022	23.12.2022 31.03.2023 31.03.2023
6	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಗರ ಯೋಜಕರು	ಶ್ರೀ ಪಿ ನಂದೀಶ ಶ್ರೀ ಕಾರ್ತಿಕ್ ಸಿ	01.04.2022 01.04.2022	31.03.2023 31.03.2023

7	ವಿಷಯ ನಿರ್ವಾಹಕರು ಪ್ರಥಮ ದರ್ಜೆ ಸಹಾಯಕರು ಲೆಕ್ಕ ಅಧೀಕ್ಷಕರು	ಶ್ರೀ ಮಂಜುಳ ಬಿ ಶ್ರೀ ಶಿವಣ್ಣ	01.04.2022 01.04.2022	31.03.2023 31.03.2023

6) ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಗಳನ್ನು ಸಲ್ಲಿಸಲು ಕ್ರಮ ವಹಿಸುವುದು:–

ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ನಿಯಮಗಳನ್ವಯ ಆಡಿಟ್ ಮಿನಿಟ್ ವಹಿಯನ್ನು ನಿರ್ವಹಿಸಿ, ಸದರಿ ವಹಿಯಲ್ಲಿ ಲೆಕ್ಕ ಪರಿಶೋಧನಾ ವರದಿಯ ಯಥಾ ಪ್ರತಿಯನ್ನು ಬರೆದು ಕಂಡಿಕೆವಾರು ಉತ್ತರಗಳನ್ನು ಸಿದ್ಧಪಡಿಸಿ ಸಭೆಯ ಅನುಮೋದನೆ ಪಡೆದು ಪತ್ರ ಸಂಖ್ಯೆ:ಬಿಎಂಐಸಿಎಪಿಎ/ಲೆ.ಪ.ವ/2022–23/ದಿ:10.03.2023ರಲ್ಲಿ ಪೂರಕ ದಾಖಲೆಗಳೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದೆ. ಸಕ್ಷಮ ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿಲ್ಲವಾಬ್ದರಿಂದ ಸದರಿಯವರ ಅಭಿಪ್ರಾಯದೊಂದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಮುಂದಿನ ಕ್ರಮ ವಹಿಸಬಹುದಾಗಿರುತ್ತದೆ.

		ಆಕ್ಷೇಪಣೆ & ವಸೂಲಾತಿ				ತೀರುವಳಿ				ಬಾಕಿ			
ಕ್ರ. ಸಂ	ವರ್ಷಗಳು	ಕ್ರ. ಸಂ	ಆಕ್ಷೇಪಣೆ ಮೊತ್ತ	ಕ್ರ. ಸಂ	ವಸೂಲಾತಿ ಮೊತ್ತ	ಕ್ರ. ಸಂ	ಆಕ್ಷೇಪಣೆ ಮೊತ್ತ	ಕ್ರ. ಸಂ	ವಸೂಲಾತಿ ಮೊತ್ತ	ಕ್ರ. ಸಂ	ಆಕ್ಷೇಪಣೆ ಮೊತ್ತ	ಕ್ರ. ಸಂ	ವಸೂಲಾತಿ ಮೊತ್ತ
1	1999–2000 ರಿಂದ 2007–08	–	0	4	45727	–	–	–	–	–	–	4	45727
2	2008–2009	1	134832	4	13739	–	–	–	–	1	134832	4	13739
3	2009–2010		14299929	–	44395	–	–	–	–	–	14299929	–	44395
4	2010–2011	–	0	2	17756	–	–	–	–	–	–	2	17756
5	2011–12	–	0	1	513	–	–	–	–	–	–	1	513
6	2013–14 & 2014–15	3	20405608	2	767449	–	–	–	–	3	20405608	2	767449
7	2015–16	5	19591904	2	312336	–	–	–	–	5	19591904	2	312336
8	2016–17	2	763397305	1	1950	–	–	–	–	2	763397305	1	1950
9	2017–18	9	322282923	1	417046					9	322282923	1	417046
10	2018–19	3	162052983	1	258001	–	–	–	–	3	162052983	1	258001
11	2019–20	4	292992450	0	0	–	–	–	–	4	292992450	0	0
12	2020–21	2	805468	1	52606	–	–	–	–	2	805468	1	52606
13	2021–22	3	7369015	1	6480	–	–	–	–	3	7369015	1	6480
	ಒಟ್ಟು ರೂ.	**32**	**1603332417**	**20**	**1937998**	–	–	–	–	**32**	**1603332417**	**20**	**1937998**

7.ಮಿನಿಟ್ ವಹಿ.

ಆಡಿಟ್ ಮಿನಿಟ್ ವಹಿಯನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಕಡ್ಡಾಯವಾಗಿ ನಿರ್ವಹಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ವಹಿಯಲ್ಲಿ ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಯ ವಿವರಗಳನ್ನು ದಾಖಲಿಸಿಕೊಂಡು ಅನುಸರಣಾ ಉತ್ತರವನ್ನು ದಾಖಲಿಸಿಕೊಂಡು ಕಂಡಿಕೆಗಳ ತೀರುವಳಿಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಕುರಿತು ಸೂಕ್ತ ಕ್ರಮ ಜರುಗಿಸುವಂತೆ ಸೂಚಿಲಾಗಿದೆ.

8.ಪ್ರಾಧಿಕಾರದ ಸಭೆಗಳು;-

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಒಟ್ಟು 05 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳ ವಿವರಣೆ ಈ ಕೆಳಕಂಡಂತಿದೆ.

ಸಭೆ ದಿನಾಂಕ	ಸಭೆ ಸಂಖ್ಯೆ
12-05-2022	72
29-08-2022	73
08-11-2022	74
06-02-2023	75
04-03-2023	76

9) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆ :-

1.	**ಕೈನಗದು ಶಿಲ್ಕು**	ಲೆಕ್ಕ ಪರಿಶೋಧನಾ ಪ್ರಾರಂಭಿಕ ದಿನಾಂಕ 22.11.2023 ರಂದು ರೂ.**163**/- ರೂ. 100 * 1 — 100 ರೂ. 20 * 2 — 40 ರೂ. 10 * 2 — 20 ರೂ. ನಾಣ್ಯಗಳು — 3 **ಒಟ್ಟು ರೂ. — 163**
2.	**ಅಂಚೆ ಚೀಟಿಗಳು:**	ಲೆಕ್ಕ ಪರಿಶೋಧನಾ ಪ್ರಾರಂಭಿಕ ದಿನಾಂಕ:22.11.2023ಕ್ಕೆ ರೂ.324/-ಗಳ ಮೌಲ್ಯದ ಅಂಚೆ ಚೀಟಿಗಳಿದ್ದು ತಾಳೆಯಾಗಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ. **ಅಂಚೆ ಚೀಟಿ ಮುಖಬೆಲೆ** — **ಮೊತ್ತ** **ಆರಂಭಿಕ ಶಿಲ್ಕು — 35** ಸ್ವೀಕೃತಿ — 10000 ಒಟ್ಟು — 10035 ಖರ್ಚು — 10030 **ಅಂತಿಮ ಶಿಲ್ಕು — 05**
3.	ರಸೀದಿ ಪುಸ್ತಕಗಳು.	ಲೆಕ್ಕ ಪರಿಶೋಧನಾ ದಿನಾಂಕ 22.11.2023ರಂದು ರಸೀದಿ ದಾಸ್ತಾನು ವಹಿಯನ್ನು

		ಪರಿಶೀಲಿಸಲಾಗಿ ಒಟ್ಟು 16 ರಸೀದಿ ಪುಸ್ತಕಗಳು ದಾಸ್ತಾನಿನಲ್ಲಿದ್ದು ರಸೀದಿ ಪುಸ್ತಕದ ಸಂಖ್ಯೆ: 30 ರಿಂದ 36ಗಳು ದಾಸ್ತಾನು ಪುಸ್ತಕದ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.
4.	ಅಕ್ರಮ ಸಕ್ರಮ ಅರ್ಜಿ ಫಾರಂಗಳು.	ಲೆಕ್ಕ ಪರಿಶೋಧನಾ ದಿನಾಂಕ: 22.11.2023 ರಂದು ಅಕ್ರಮ ಸಕ್ರಮದ ಅರ್ಜಿ ಫಾರಂಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿದ್ದು, ಒಟ್ಟು ಅರ್ಜಿ ಸಂಖ್ಯೆ: (0136202 ರಿಂದ 0136300) 99 ಫಾರಂಗಳಿದ್ದು ದಾಸ್ತಾನು ಪುಸ್ತಕದ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.
5.	ಹೂಡಿಕೆಗಳು	ಲೆಕ್ಕ ಪರಿಶೋಧನಾ ಪ್ರಾರಂಭಿಕ ದಿನಾಂಕ 22.11.2023ಕ್ಕೆ 2022–23ನೇ ಸಾಲಿಗೆ ರೂ. 36,60,00,000/–ಗಳ ಹೂಡಿಕೆ ಮಾಡಿರುವುದು ಕಂಡುಬಂದಿದ್ದು. ಹೂಡಿಕೆ ಮಾಡಲಾದ ಹೂಡಿಕೆ ಪತ್ರಗಳನ್ನು ಭೌತಿಕವಾಗಿ ಪರಿಶೀಲಿಸಿದೆ.

10) 2022–23 ನೇ ಸಾಲಿನ ಅನುಮೋದಿತ ಆಯವ್ಯಯ :–

ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 22ರ ಪ್ರಕಾರ ಮುಂಬರುವ ಆರ್ಥಿಕ ವರ್ಷದ ಆಯವ್ಯಯವನ್ನು ನಿಗಧಿತ ಅನುಬಂಧ–4ರಲ್ಲಿ 6 ಪ್ರತಿಗಳನ್ನು ಸಿದ್ದಪಡಿಸಿ ಜನವರಿ ತಿಂಗಳೊಳಗಾಗಿ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಕೆಳಕಂಡಂತೆ 2022–23ನೇ ಸಾಲಿನ ಆಯವ್ಯಯಕ್ಕೆ ದಿನಾಂಕ 29–01–2022ರಂದು ನಡೆದ 71ನೇ ಸಮಾನ್ಯ ಸಭೆಯಲ್ಲಿ ಅಂಗೀಕಾರ ಪಡೆದು, ಸರ್ಕಾರಕ್ಕೆ ಸಲ್ಲಿಸಿರುವುದು ಕಂಡುಬಂದಿದೆ. ಆದರೆ ಸರ್ಕಾರದಿಂದ ಅನುಮೋದನೆ ಪತ್ರ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

	ನಿರೀಕ್ಷಿತ		ಒಟ್ಟು ನಿರೀಕ್ಷಿತ	ವಾಸ್ತವಿಕ
	Ordinary Section	Capital Section		Actuals
1.4.2022ಕ್ಕೆ ಪ್ರಾರಂಭ ಶಿಲ್ಕು	**784450**	**21009373**	**21793823**	**119904025**
2022–23ರಲ್ಲಿ ಜಮೆ	67189000	190000000	257189000	311987110
ಒಟ್ಟು ರೂ.	**67973450**	**211009373**	**278982823**	**431891135**
2022–23ರಲ್ಲಿ ವೆಚ್ಚ	60000000	217520000	277520000	24636392
31.03.2023ಕ್ಕೆಆಖೈರು ಶಿಲ್ಕು	**7973450**	**–6510627**	**1462823**	**41254743**

ಮೇಲಿನಂತೆ ನಿರೀಕ್ಷಿತ Ordinary section ಹಾಗೂ Capital sectionಗಳ ಜಮಾ ಹಾಗೂ ಖರ್ಚುಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಯಾವ ಮಾನದಂಡದ ಮೇಲೆ ಆಯವ್ಯಯ ಸಿದ್ದಪಡಿಸಲಾಗಿದೆ ಎಂಬ ವಿವರ ತಿಳಿದು ಬಂದಿರುವುದಿಲ್ಲ. ವಾಸ್ತವಿಕ ಆಯವ್ಯಯಕ್ಕೂ ಹಾಗು ನಿರೀಕ್ಷಿತ ಆಯವ್ಯಯಕ್ಕೂ ವ್ಯತ್ಯಾಸ ಕಂಡುಬಂದಿದೆ. ಈ ಸಂಬಂಧ ವಿವರಣೆ ನೀಡುವುದು. ಅಲ್ಲದೇ ಇನ್ನು ಮುಂದೆ ಆಯವ್ಯಯ ಸಿದ್ದಪಡಿಸುವಾಗ ಹಿಂದಿನ ಮೂರು ವರ್ಷಗಳ ಆದಾಯ ಮತ್ತು ವೆಚ್ಚಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಂಡು ತಯಾರಿಸಲು ಕ್ರಮ ವಹಿಸುವುದು. 2022–23ನೇ ಸಾಲಿನ ಆಯ–ವ್ಯಯದ ವಿವರಗಳನ್ನು **ಅನುಬಂಧ– 01**ರಲ್ಲಿ ಲಗತ್ತಿಸಿದೆ.

11) ಬ್ಯಾಂಕ್ ಖಾತೆಗಳ ವಿವರ:

ಪ್ರಾದಿಕಾರವು ಎಸ್.ಬಿ.ಐ ಬಹುಮಹಡಿ ಕಟ್ಟಡ ಬೆಂಗಳೂರು ಇಲ್ಲಿ ಒಟ್ಟು 06 ಖಾತೆಗಳನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಖಾತೆಗಳ ವಿವರ	ಬ್ಯಾಂಕ್	ಖಾತೆ ಸಂಖ್ಯೆ
1	ಉತ್ತಮತೆ ಶುಲ್ಕ ಮತ್ತು ಸಾಮಾನ್ಯ ಖಾತೆ	ಎಸ್.ಬಿ.ಐ	54034600702
2	ಕೆರೆ ಸಂರಕ್ಷಣಾ ಶುಲ್ಕಕ್ಕೆ ಸಂಬಂಧಿಸಿದ ಖಾತೆ	ಎಸ್.ಬಿ.ಐ	64212820608
3	ಕೊಳಚೆ ನಿರ್ಮೂಲನಾ ಶುಲ್ಕಕ್ಕೆ ಸಂಬಂಧಿಸಿದ ಖಾತೆ	ಎಸ್.ಬಿ.ಐ	64212820472
4	ಅಕ್ರಮ-ಸಕ್ರಮಕ್ಕೆ ಸಂಬಂಧಿಸಿದ ಖಾತೆ	ಎಸ್.ಬಿ.ಐ	64025267109
5	ಉದ್ಯಾನವನ ಶುಲ್ಕಕ್ಕೆ ಸಂಬಂಧಿಸಿದ ಖಾತೆ	ಎಸ್.ಬಿ.ಐ	38337941831
6	ಟಿ.ಡಿ.ಆರ್ ಶುಲ್ಕಕ್ಕೆ ಸಂಬಂಧಿಸಿದ ಖಾತೆ	ಎಸ್.ಬಿ.ಐ	377387637

ಭಾಗ-2

12) ಖಾತೆವಾರು ಆರ್ಥಿಕ ವಿವರ:-

(ಅ) ಉತ್ತಮತೆ ಶುಲ್ಕ ಮತ್ತು ಇತರೆ ಖಾತೆ

ಉತ್ತಮತೆ ಶುಲ್ಕ ಮತ್ತು ಇತರೆ ಖಾತೆಯನ್ನು ಎಸ್.ಬಿ.ಐ ಬಹುಮಹಡಿ ಕಟ್ಟಡ ಶಾಖೆ, ಖಾತೆ ಸಂಖ್ಯೆ: 54034600702ನ್ನು ತೆರೆದು ವಹಿವಾಟು ನಡೆಸುತ್ತಿದ್ದು ವಿವರ ಈ ಕೆಳಕಂಡಂತಿದೆ.

1.04.2022ಕ್ಕೆ ಪ್ರಾರಂಭಿಕ ಶಿಲ್ಕು	73085446
2022-23ನೇ ಸಾಲಿಗೆ ಸ್ವೀಕೃತಿ	96438848
ಬಡ್ಡಿ/ ಎಫ್.ಡಿ.ಆರ್. ಮೆಚುರಿಟಿ	207357827
ಒಟ್ಟು :	**376882121**
31.03.2023ಕ್ಕೆ ಒಟ್ಟು ವೆಚ್ಚ	351072214
31.03.2023ಕ್ಕೆ ನಗದು ಪುಸ್ತಕದಂತೆ ಅಂತಿಮ ಶಿಲ್ಕು:	25809907
31.03.2023ಕ್ಕೆ ಅಂತಿಮ ಶುಲ್ಕ (ಪಾಸ್ ಪುಸ್ತಕ)	25989395
ವ್ಯತ್ಯಾಸ:	**179488**

ವ್ಯತ್ಯಾಸಕ್ಕೆ ಕಾರಣ ನಗದಾಗದ ಚೆಕ್ಕುಗಳು.

(ಆ) ಕೆರೆ ಸಂರಕ್ಷಣೆ ಶುಲ್ಕದ ಖಾತೆ

ಕೆರೆ ಸಂರಕ್ಷಣೆ ಶುಲ್ಕದ ಖಾತೆಯನ್ನು ಎಸ್.ಬಿ.ಐ ಬಹುಮಹಡಿ ಕಟ್ಟಡ ಶಾಖೆ, ಖಾತೆ ಸಂಖ್ಯೆ: 64212820608ನ್ನು ದಿನಾಂಕ: 06.02.2017ರಲ್ಲಿ ಹೊಸದಾಗಿ ಖಾತೆ ತೆರೆದು ವಹಿವಾಟು ನಡೆಸುತ್ತಿದ್ದು ವಿವರ ಈ ಕೆಳಕಂಡಂತಿದೆ.

1.04.2022ಕ್ಕೆ ಪ್ರಾರಂಭಿಕ ಶಿಲ್ಕು	39619962
2022-23ನೇ ಸಾಲಿಗೆ ಸ್ವೀಕೃತಿ	22788058
ಬಡ್ಡಿ/ ಎಫ್.ಡಿ.ಆರ್. ಮೆಚ್ಯುರಿಟಿ	0
ಒಟ್ಟು :	**62408020**

31.03.2023ಕ್ಕೆ ಒಟ್ಟು ವೆಚ್ಚ	48600000
31.03.2023ಕ್ಕೆ ನಗದು ಪುಸ್ತಕದಂತೆ ಅಂತಿಮ ಶಿಲ್ಕು:	13808020
31.03.2023ಕ್ಕೆ ಅಂತಿಮ ಶುಲ್ಕ (ಪಾಸ್ ಪುಸ್ತಕ)	13808020
ವ್ಯತ್ಯಾಸ:	**0**

ಇ) ಕೊಳಚೆ ನಿರ್ಮೂಲನೆ ಶುಲ್ಕದ ಖಾತೆ

ಕೊಳಚೆ ನಿರ್ಮೂಲನೆ ಶುಲ್ಕದ ಖಾತೆಯನ್ನು ಎಸ್.ಬಿ.ಐ ಬಹುಮಹಡಿ ಕಟ್ಟಡ ಶಾಖೆ, ಖಾತೆ ಸಂಖ್ಯೆ: 64212820472ರನ್ನು ದಿನಾಂಕ: 06.02.2017ರಲ್ಲಿ ಹೊಸದಾಗಿ ಖಾತೆ ತೆರೆದು ವಹಿವಾಟು ನಡೆಸುತ್ತಿದ್ದು ವಿವರ ಈ ಕೆಳಕಂಡಂತಿದೆ.

1.04.2022ಕ್ಕೆ ಪ್ರಾರಂಭಿಕ ಶಿಲ್ಕು	5006207
2022–23ನೇ ಸಾಲಿಗೆ ಸ್ವೀಕೃತಿ	1608733
ಒಟ್ಟು :	**6614940**
31.03.2023ಕ್ಕೆ ಒಟ್ಟು ವೆಚ್ಚ	5300108
31.03.2023ಕ್ಕೆ ನಗದು ಪುಸ್ತಕದಂತೆ ಅಂತಿಮ ಶಿಲ್ಕು	1314832
31.03.2023ಕ್ಕೆ ಅಂತಿಮ ಶಿಲ್ಕು (ಪಾಸ್ ಪುಸ್ತಕ)	1314272
ವ್ಯತ್ಯಾಸ:	**560**

ಈ) ಅಕ್ರಮ ಸಕ್ರಮ ಖಾತೆಯ ಆರ್ಥಿಕ ಪರಿಸ್ಥಿತಿ:–

ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿ2.ಬಿ.ಎಂ.ಆರ್.ಯು.ಎ–2007 ಬೆಂಗಳೂರು ದಿನಾಂಕ: 26.02.2008ರಲ್ಲಿ ಅನಧಿಕೃತ ಅಭಿವೃದ್ಧಿ ಅಥವಾ ನಿರ್ಮಾಣಗಳನ್ನು ಸಕ್ರಮಗೊಳಿಸಲು ದರ ನಿಗದಿ ಪಡಿಸಿದ್ದು ಇದರಿಂದ ವಸೂಲಿ ಮಾಡಲಾದ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬಹು ಮಹಡಿ ಕಟ್ಟಡ ಶಾಖೆಯ ಖಾತೆ ಸಂಖ್ಯೆ: 64025267109ಕ್ಕೆ ಜಮಾ ಮಾಡಲಾಗಿದೆ. ಸದರಿ ಖಾತೆಯ 2022–23ನೇ ಸಾಲಿನ ಆರ್ಥಿಕ ವಹಿವಾಟು ಮುಂದಿನಂತಿರುತ್ತದೆ.

2022–23ನೇ ಸಾಲಿಗೆ

(ರೂ.ಗಳಲ್ಲಿ)

1.04.2022ಕ್ಕೆ ಪ್ರಾರಂಭಿಕ ಶಿಲ್ಕು	253037
2022–23ನೇ ಸಾಲಿಗೆ ಸ್ವೀಕೃತಿ	0
ಬಡ್ಡಿ	6902
ಒಟ್ಟು :	**259939**
31.03.2023ಕ್ಕೆ ಒಟ್ಟು ವೆಚ್ಚ	0
31.03.2023ಕ್ಕೆ ನಗದು ಪುಸ್ತಕದಂತೆ ಅಂತಿಮ ಶಿಲ್ಕು	**259939**
31.03.2023ಕ್ಕೆ ಅಂತಿಮ ಶಿಲ್ಕು (ಪಾಸ್ ಪುಸ್ತಕ)	**259939**
ವ್ಯತ್ಯಾಸ:	–

ಊ) ಟಿ.ಡಿ.ಆರ್ ಖಾತೆ:

ಟಿ.ಡಿ.ಆರ್ ಖಾತೆ ಶುಲ್ಕದ ಖಾತೆಯನ್ನು ಎಸ್.ಬಿ.ಐ ಬಹುಮಾಡಿ ಕಟ್ಟಡ ಶಾಖೆ ಖಾತೆ ಸಂಖ್ಯೆ 37738763711ರಲ್ಲಿ ವಹಿವಾಟು ನಡೆಸುತ್ತಿದ್ದು, ವಿವರ ಕೆಳಕಂಡಂತಿದೆ.

(ರೂ. ಗಳಲ್ಲಿ)

1.04.2022ಕ್ಕೆ ಪ್ರಾರಂಭಿಕ ಶಿಲ್ಕು	3916
2022–23ನೇ ಸಾಲಿಗೆ ಸ್ವೀಕೃತಿ	0
ಬಡ್ಡಿ	108
ಒಟ್ಟು :	**4024**
31.03.2023ಕ್ಕೆ ಒಟ್ಟು ವೆಚ್ಚ	0
31.03.2023ಕ್ಕೆ ನಗದು ಪುಸ್ತಕದಂತೆ ಅಂತಿಮ ಶಿಲ್ಕು:	4024
31.03.2023ಕ್ಕೆ ಅಂತಿಮ ಶಿಲ್ಕು (ಪಾಸ್ ಪುಸ್ತಕ)	4024
ವ್ಯತ್ಯಾಸ:	–

ಋ) ಉದ್ಯಾನವನ ನಿರ್ವಹಣೆಯ ಖಾತೆ

ಉದ್ಯಾನವನ ನಿರ್ವಹಣೆಯ ಶುಲ್ಕದ ಖಾತೆಯನ್ನು ಎಸ್.ಬಿ.ಐ ಬಹುಮಹಡಿ ಕಟ್ಟಡ ಶಾಖೆ, ಖಾತೆ ಸಂಖ್ಯೆ: 38337941831ರನ್ನು ದಿನಾಂಕ: 23.03.2019ರಲ್ಲಿ ಹೊಸದಾಗಿ ಖಾತೆ ತೆರೆದು ವಹಿವಾಟು ನಡೆಸುತ್ತಿದ್ದು ವಿವರ ಈ ಕೆಳಕಂಡಂತಿದೆ.

(ರೂ. ಗಳಲ್ಲಿ)

1.04.2022ಕ್ಕೆ ಪ್ರಾರಂಭಿಕ ಶಿಲ್ಕು	1935457
2022–23ನೇ ಸಾಲಿಗೆ ಸ್ವೀಕೃತಿ	0
ಬಡ್ಡಿ	22564
ಒಟ್ಟು :	**1958021**
31.03.2023ಕ್ಕೆ ಒಟ್ಟು ವೆಚ್ಚ	1900000
31.03.2023ಕ್ಕೆ ನಗದು ಪುಸ್ತಕದಂತೆ ಅಂತಿಮ ಶಿಲ್ಕು:	**58021**
31.03.2023ಕ್ಕೆ ಅಂತಿಮ ಶುಲ್ಕ (ಪಾಸ್ ಪುಸ್ತಕ)	**58021**
ವ್ಯತ್ಯಾಸ:	–

13) ಸಮಗ್ರ ಸಂಸ್ಥೆಯ ಆರ್ಥಿಕ ಪರಿಸ್ಥಿತಿ:–

ಸಂಸ್ಥೆಯ 2022–23ನೇ ಸಾಲಿನ ಆರ್ಥಿಕ ವಹಿವಾಟನ್ನು ಉತ್ತಮತೆ ಶುಲ್ಕ, ಕೆರೆ ಸಂಗ್ರಹಣಾ ಶುಲ್ಕ ಮತ್ತು ಕೊಳಚೆ ನಿರ್ಮೂಲನೆ ಶುಲ್ಕಕ್ಕೆ ಸಂಬಂಧಿಸಿದ ಖಾತೆಗಳನ್ನು ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ ಬಹು ಮಹಡಿ ಕಟ್ಟಡ ಶಾಖೆಯ ಖಾತೆ ಸಂಖ್ಯೆ: 54034600702ರಲ್ಲಿ ನಡೆಸಲಾಗಿದ್ದು, 3 ಖಾತೆಗೆ ಸಂಬಂಧಿಸಿದಂತೆ ಒಂದೇ ನಗದು ಪುಸ್ತಕವನ್ನು ನಿರ್ವಹಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕಗಳೊಂದಿಗೆ ಪರಿಶೀಲನೆ ಮಾಡಿ ಸಮಗ್ರ ಆರ್ಥಿಕ ಪರಿಸ್ಥಿತಿಯನ್ನು ಸಿದ್ದಪಡಿಸಲಾಗಿದ್ದು, ವಹಿವಾಟು ಮುಂದಿನಂತಿರುತ್ತದೆ.

2022–23ನೇ ಸಾಲಿಗೆ

(ರೂ.ಗಳಲ್ಲಿ)

1–04–2022ಕ್ಕೆ ಪ್ರಾರಂಭಿಕ ಶಿಲ್ಕು	119904025
2022–23ನೇ ಸಾಲಿಗೆ ಸ್ವೀಕೃತಿ	104629283
ಬಡ್ಡಿ/ ಎಫ್.ಡಿ.ಆರ್. ಮೆಚುರಿಟಿ	207357827
ಒಟ್ಟು:	**431891135**
ಒಟ್ಟು ವೆಚ್ಚ	390636392
31–3–2023 ಕ್ಕೆ ನಗದು ಬಹಿಯಂತೆ ಅಂತಿಮ ಶಿಲ್ಕು	41254743
31–3–2023 ಕ್ಕೆ ಪಾಸು ಪುಸ್ತಕದಂತೆ ಅಂತಿಮ ಶಿಲ್ಕು	41433671
ವ್ಯತ್ಯಾಸ	178928

ಆರ್ಥಿಕ ಪರಿಸ್ಥಿತಿಯ ವಿವರವನ್ನು ಅನುಬಂಧ–1ರಲ್ಲಿ ವಿವರಿಸಿ ವರದಿಯೊಂದಿಗೆ ಅಡಕವಿರಿಸಿದೆ.

14) ನಗದು ಬಹಿಯನ್ನು ನಿಯಮಾನುಸಾರ ನಿರ್ವಹಿಸುವ ಕುರಿತು:–

ಪ್ರಾಧಿಕಾರವು ತನ್ನ ವಹಿವಾಟಿಗೆ ಸಂಬಂಧಿಸಿದಂತೆ 2022–23ನೇ ಸಾಲಿನಲ್ಲಿ ನಿರ್ವಹಿಸಲಾದ ನಗದು ಬಹಿಯನ್ನು ಪರಿಶೀಲಿಸಿದ್ದು ಈ ಕೆಳಕಂಡ ನ್ಯೂನ್ಯತೆಗಳಿರುತ್ತವೆ.

ಪ್ರಾಧಿಕಾರವು ಹೊಂದಿರುವ ಬ್ಯಾಂಕ್ ಖಾತೆಗಳವಾರು ಕ್ರೋಢೀಕೃತ ಆರ್ಥಿಕ ವ್ಯವಹಾರವನ್ನು ದಾಖಲಿಸಿ ನಗದು ಪುಸ್ತಕವನ್ನು ನಿರ್ವಹಿಸಿರುವುದು ಕಂಡುಬಂದಿರುತ್ತದೆ. 2022–23ನೇ ಸಾಲಿನಲ್ಲಿ ನಡೆಸಲಾಗಿರುವ ಆರ್ಥಿಕ ವ್ಯವಹಾರಗಳನ್ನು ಬ್ಯಾಂಕ್ ಖಾತೆವಾರು ನಿರ್ವಹಿಸದೇ ಒಟ್ಟಿಗೆ ನಗದು ಪುಸ್ತಕಗಳಲ್ಲಿನ ಆರ್ಥಿಕ ವ್ಯವಹಾರಗಳನ್ನು ಆಧರಿಸಿ ಪರಿಶೀಲಿಸಲಾಗಿರುತ್ತದೆ. ಸದರಿ ಸಂಸ್ಥೆಯ ನಗದು ಪುಸ್ತಕವನ್ನು ಸರ್ಕಾರದ ಆದೇಶ ಸಂಖ್ಯೆ ಯುಡಿಡಿ 16 ಸಿಎಆರ್ 2006 ದಿನಾಂಕ 21–02–2006ರ ಪ್ರಕಾರ ದಿನಾಂಕ 1–4–2006ರಿಂದ ದ್ವಿ–ನಮೂದು ಪದ್ಧತಿಯಲ್ಲಿ (Double Entry Accounting System) ನಿರ್ವಹಿಸುವುದು.

15. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ:–

2022–23ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು, ನಿಯಮಾನುಸಾರ ನಿರ್ವಹಿಸಲು ತಿಳಿಸಿದೆ. ಆದಾಗ್ಯೂ, ಪ್ರಾಧಿಕಾರದವರು ನೀಡಿದ ವಿವರಗಳಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು **ಅನುಬಂಧ –2ರಲ್ಲಿ** ವರದಿಗೆ ಲಗತ್ತಿಸಲಾಗಿದೆ.

16.ಅನುದಾನಗಳ ವಹಿ:–

2022–23ನೇ ಸಾಲಿಗೆ ಅನುದಾನದ ವಹಿಯನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿದ್ದು. ಪ್ರಾಧಿಕಾರವು 1985 ಕಾಯ್ದೆ 11 ರಂತೆ ಕ್ರಮವರಿತು ವಹಿಯನ್ನು ನಿರ್ವಹಿಸಬೇಕಾಗಿರುತ್ತದೆ. ಸದರಿ ಪ್ರಾದಿಕಾರಕ್ಕೆ

ಸರ್ಕಾರದ ವತಿಯಿಂದ ಯಾವುದೇ ಅನುದಾನ 2022–23ನೇ ಸಾಲಿನಲ್ಲಿ ಬಿಡುಗಡೆಯಾಗಿರುವುದಿಲ್ಲ ಎಂದು ತಿಳಿಸಿದ್ದು, ಅನುದಾನದ ವಹಿಯನ್ನು ನಿಯಮಾನುಸಾರ ನಿರ್ವಹಿಸಲು ತಿಳಿಸಲಾಗಿರುತ್ತದೆ.

ಪ್ರಾಧಿಕಾರದ ಕಾಯ್ದೆ 1985 ಕಲಂ 16(1)ರನ್ವಯ ಆಯವ್ಯಯಕ್ಕೆ ಅನುಗುಣವಾಗಿ ಬಾಬ್ತುವಾರು ಜಮೆ–ಖರ್ಚಿನ ವಿವರಗಳನ್ನು ವರ್ಗೀಕರಿಸಿ, ವರ್ಗೀಕರಣ ವಹಿಯಲ್ಲಿ ದಾಖಲಿಸಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ವಹಿಯನ್ನು ನಿಯಮಾನುಸಾರ ನಿರ್ವಹಿಸುವುದು ಮತ್ತು ಆಯವ್ಯಯದ ಪ್ರಕಾರ ಯಾವ ಯಾವ ಬಾಬ್ತುಗಳಿಂದ ಎಷ್ಟು ಸ್ವೀಕೃತಿ ಮತ್ತು ಸಂದಾಯಗಳನ್ನು ನಿಗದಿಪಡಿಸಲಾಗಿತ್ತು ಹಾಗೂ ಈ ಪ್ರಕಾರ ಸ್ವೀಕೃತಿ ಮತ್ತು ಪಾವತಿಗಳನ್ನು ಮಾಡಲಾಗಿದೆಯೇ ಮತ್ತು ಆಯವ್ಯಯದಲ್ಲಿನ ಲೆಕ್ಕಶೀರ್ಷಿಕೆವಾರು ನಿರೀಕ್ಷಿತ ವೆಚ್ಚಕ್ಕಿಂತ ಹೆಚ್ಚಿನ ಮೊತ್ತ ಪಾವತಿಸಲಾಗಿದೆಯೇ ಎಂಬ ಬಗ್ಗೆ ತಾಳೆ ಮಾಡಿ ನ್ಯೂನತೆಗಳ ಬಗ್ಗೆ ಪ್ರಸ್ತಾಪಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ನಿಗದಿತ ನಮೂನೆಯಲ್ಲಿ ಬಾಬ್ತುವಾರು ವರ್ಗೀಕರಣ ವಹಿಯಲ್ಲಿ ನಿಗದಿತ ನಮೂನೆಯಲ್ಲಿ ವಿವರಗಳನ್ನು ದಾಖಲಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ತಿಳಿಸಲಾಗಿದೆ.

ಈ ಯೋಜನಾ ಪ್ರಾಧಿಕಾರಕ್ಕೆ 2022–23ರ ಸಾಲಿನಲ್ಲಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ತಿಳಿಸಿದ್ದು, ಅನುದಾನದ ವಹಿವಾಟು ಇಲ್ಲವಾದರು ಸಹ ಅನುದಾನದ ವಹಿಯನ್ನು ನಿಯಮಾನುಸಾರ ನಿರ್ವಹಿಸುವುದು ಎಂದು ವರದಿ ಅಭಿಪ್ರಾಯಿಸಿದೆ.

17) ವಾರ್ಷಿಕ ಲೆಕ್ಕಪತ್ರಗಳನ್ನು ಸಕಾಲದಲ್ಲಿ ಸಲ್ಲಿಸುವ ಕುರಿತು :–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಪ್ರಕರಣ 68(ಸಿ)(1) ರಂತೆ ಪ್ರತಿ ಯೋಜನಾ ಪ್ರಾಧಿಕಾರವು ಅಥಾವೆ ಪತ್ರಿಕೆಯನ್ನು ಒಳಗೊಂಡಂತೆ ವಾರ್ಷಿಕ ಲೆಕ್ಕಗಳನ್ನು ನಿರ್ದಿಷ್ಟವಾಗಿ ನಿಗಧಿಗೊಳಿಸಿರುವ ನಮೂನೆಗಳಲ್ಲಿ ಸಿದ್ಧಪಡಿಸಬೇಕಾಗಿರುತ್ತದೆ. ಸದರಿ ಪ್ರಾಧಿಕಾರದಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸ ಬೇಕಾಗಿರುತ್ತದೆ. 2022–23ನೇ ಸಾಲಿಗೆ ಸಂಬಂಧಿಸಿದಂತೆ ನಾಗರಿಕ ಸೌಲಭ್ಯ ನಿವೇಶನಗಳು ಹಾಗು ಇತರೆ ಆಸ್ತಿಗಳ ಆರಂಭಿಕ ಶಿಲ್ಕು ಪಟ್ಟಿ (ಓ.ಬಿ.ಸಿ) ತಯಾರಿಸಿ ಸಮತೋಲನ ಪಟ್ಟಿಯಲ್ಲಿ ಅಳವಡಿಸಿಕೊಂಡು ಸರ್ಕಾರ ನಿರ್ಧಿಷ್ಟಪಡಿಸಿರುವ ಸವಕಳಿಯೊಂದಿಗೆ ಕಳೆದು ಮೌಲ್ಯವನ್ನು ನಿರ್ಧಿರಿಸಬೇಕಾಗಿದ್ದು,. 2022–23ನೇ ಸಾಲಿಗೆ ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ ಹಾಗು 2022–23ನೇ ಸಾಲಿನಲ್ಲಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುವ ನಾಗರೀಕ ಸೌಲಭ್ಯ ನಿವೇಶನಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರುಕಟ್ಟೆ ದರದನ್ವಯ ಮೊತ್ತವನ್ನು ನಮೂದಿಸಬೇಕಾಗಿದ್ದು, ಸದರಿ ವಹಿಯನ್ನು ಲೆಕ್ಕ ಪರಿಶೋಧನೆಗೆ ಸಲ್ಲಿಸಲಾಗಿದ್ದು, ಮಾರುಕಟ್ಟೆ ದರವನ್ನು ನಮೂದಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನೊಳಗೊಂಡಂತೆ ಹಾಗು ಸರ್ಕಾರದ ಆದೇಶದನ್ವಯ ಸನ್ನದು ಲೆಕ್ಕಿಗರಿಂದ ವಾರ್ಷಿಕ ಜಮಾ ಮತ್ತು ಖರ್ಚು ಸಮತೋಲನ ಪಟ್ಟಿಯನ್ನು ತಯಾರಿಸಿ ಈ ಕಛೇರಿಗೆ ರವನಿಸಲು ಸೂಚಿಸಿದೆ.

ಯೋಜನಾ ಪ್ರಾಧಿಕಾರವು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸಿದ ನಗದು ಪುಸ್ತಕ, ಬ್ಯಾಂಕ್ ಪಾಸ್‌ಶೀಟ್‌ಗಳು, ಪೂರಕವಹಿಗಳು ಮತ್ತು ಪ್ರಾಧಿಕಾರದ ಮಾಸಿಕ ಸಭೆಗಳಿಗೆ ಸಿದ್ಧಪಡಿಸಿ ಸಲ್ಲಿಸಿದ್ದ ಮಾಸಿಕ ಜಮಾ ಖರ್ಚು ತಃಖ್ತೆಗಳನ್ನು ಆಧರಿಸಿ 2022–23ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲಾಗಿದೆ. ತಕ್ಷಣ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ನಡೆದು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸುವುದು.

18) ಆಡಳಿತಾತ್ಮಕ ವಾರ್ಷಿಕ ವರದಿಯನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸುವ ಕುರಿತು :–

ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961ರ 68'ಡಿ' ಪ್ರಕಾರ ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು 1965ರ ನಿಯಮಗಳು 29ರ ಪ್ರಕಾರ ವಾರ್ಷಿಕ ವರದಿಯನ್ನು ನಿಗಧಿತ ಅನುಬಂಧ–5ರಲ್ಲಿ

ಸಿದ್ದಪಡಿಸಿ ಜೂನ್ 30 ರೊಳಗಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. 2022–23ನೇ ಸಾಲಿನ ವಾರ್ಷಿಕ ವರದಿಯನ್ನು ವಿಳಂಭವಾಗಿ ಸಲ್ಲಿಸಿರುವುದು ಕಂಡುಬಂದಿರುತ್ತದೆ. ಮುಂದಿನ ದಿನಗಳಲ್ಲಿ ನಿಗಧಿತ ಅವಧಿಯೊಳಗೆ ಸಲ್ಲಿಸುವುದು ಎಂದು ವರದಿ ಅಭಿಪ್ರಾಯಿಸಿದೆ.

19) ಸಾಲಗಳು :–

ಸಂಸ್ಥೆಯು 2022–23ನೇ ಸಾಲಿನಲ್ಲಿ ಯಾವುದೇ ರೀತಿಯ ಸಾಲವನ್ನು ಪಡೆದಿರುವುದಾಗಲೀ ಅಥವಾ ನೀಡಿರುವುದಾಗಲೀ ಕಂಡುಬಂದಿರುವುದಿಲ್ಲ.

20) ಠೇವಣಿಗಳು :–

ಸಂಸ್ಥೆಯು 2022–23ನೇ ಸಾಲಿನಲ್ಲಿ ಯಾವುದೇ ರೀತಿಯ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ ಸಹ ಈ ಸಂಬಂಧ ವಹಿಯನ್ನು ನಿರ್ವಹಿಸಿ ದೃಢೀಕರಿಸುವುದು ನಿಯಮಗಳ ರೀತ್ಯಾ ಸೂಕ್ತವಾಗಿದ್ದು ಈ ಬಗ್ಗೆ ಕ್ರಮ ಅಗತ್ಯವಾಗಿರುತ್ತದೆ.

21) ಮುಂಗಡಗಳು :–

ಸಂಸ್ಥೆಯು 2022–23ನೇ ಸಾಲಿನಲ್ಲಿ ಯಾವುದೇ ರೀತಿಯ ಮುಂಗಡಗಳನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ ಸಹ ಈ ಸಂಬಂಧ ವಹಿಯನ್ನು ನಿರ್ವಹಿಸಿ ದೃಢೀಕರಿಸುವುದು ನಿಯಮಗಳ ರೀತ್ಯಾ ಸೂಕ್ತವಾಗಿದ್ದು ಈ ಬಗ್ಗೆ ಕ್ರಮ ಅಗತ್ಯವಾಗಿರುತ್ತದೆ.

22) ಖಾಯಂ ಮುಂಗಡ ಹಣ (ತಾತ್ಕಾಲಿಕ ಮುಂಗಡ):–

ಪ್ರಾಧಿಕಾರದ ಕಛೇರಿ ಉಪಯೋಗಕ್ಕಾಗಿ ಸಣ್ಣಮಟ್ಟ ವಸ್ತುಗಳ ಖರೀದಿಗಾಗಿ ಹಾಗೂ ತುರ್ತು ಅವಶ್ಯಕತೆಯ ಕನಿಷ್ಟ ವೋಚರ್‌ಗಳ ಪಾವತಿಸುವ ಸಲುವಾಗಿ ರೂ.63362/–ಗಳ ತಾತ್ಕಾಲಿಕ ಮುಂಗಡವನ್ನು ಉಪಯೋಗಿಸಿಕೊಂಡಿದ್ದು ಮುಂಗಡಕ್ಕೆ ಸಂಬಂಧಪಟ್ಟ ವೋಚರ್‌ಗಳನ್ನು ಪರಿಶೀಲಿಸಲಾಗಿರುತ್ತದೆ. ಈ ಮೊತ್ತವನ್ನು ನಗದು ಪುಸ್ತಕದ ವೆಚ್ಚಕ್ಕೆ ತೆಗೆದುಕೊಂಡು ಉಳಿಕೆ ಮೊತ್ತವನ್ನು ಮುಂಗಡ ಮೊತ್ತಕ್ಕೆ ಮರು ಹೊಂದಾಣಿಕೆ ಮಾಡಿಕೊಳ್ಳಲಾಗಿರುವುದನ್ನು ಪರಿಶೀಲಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ.

01.04.2022ಕ್ಕೆ ಪ್ರಾರಂಭಿಕ ಶಿಲ್ಕು	864
2022–23ನೇ ಸಾಲಿನಲ್ಲಿ ಮುಂಗಡ	64000
ಒಟ್ಟು:	**64864**
2022–23ನೇ ಸಾಲಿನ ಹೊಂದಾಣಿಕೆ	64612
31–3–2023ಕ್ಕೆ ಬಾಕಿ ಉಳಿದಿರುತ್ತದೆ.	252

23) ಹೂಡಿಕೆಗಳು :–

2022–23ನೇ ಸಾಲಿನಲ್ಲಿ ಪ್ರಾಧಿಕಾರವು ಇಂಡಿಯನ್ ಬ್ಯಾಂಕ್ ನ್ಯೂ ತಿಪ್ಪಸಂದ್ರ ಶಾಖೆ ಹಾಗೂ ಕೆನರಾ ಬ್ಯಾಂಕ್ ಮಾದಾವರ ಶಾಖೆಗಳಲ್ಲಿ ಹೂಡಿಕೆ ಮಾಡಲಾಗಿದೆ. ಹೂಡಿಕೆಯ ವಹಿಯನ್ನು ಪರಿಶೀಲಿಸಿದ್ದು ವಿವರ ಮುಂದಿನಂತಿರುತ್ತದೆ. ಅನುಬಂಧ–3ರಲ್ಲಿ ವಿವರ ಲಗತ್ತಿಸಿದೆ.

2022–23ನೇ ಸಾಲಿನ ಹೂಡಿಕೆಗಳ ವಿವರ

01.04.2022ಕ್ಕೆ ಪ್ರಾರಂಭಿಕ ಶಿಲ್ಕು	197114367
2021–22ನೇ ಸಾಲಿನ ಹೂಡಿಕೆ ಮೇಲಿನ ಸ್ವೀಕೃತಿಯಾದ ಬಡ್ಡಿ ಮೊತ್ತ	10243460
2022–23ನೇ ಸಾಲಿನಲ್ಲಿ ಹೂಡಿಕೆ ಮೊತ್ತ	366000000
2022–23ನೇ ಸಾಲಿನ ಹೂಡಿಕೆ ಮೇಲಿನ ಆರ್ಜಿಸಿವ ಬಡ್ಡಿ ಮೊತ್ತ	23878948
ಒಟ್ಟು:	**597236775**
2022–23ನೇ ಸಾಲಿನ ಪರಿಪಕ್ವ ಮೊತ್ತ	207357827
31–3–2023 ಕ್ಕೆ ಅಂತಿಮ ಶಿಲ್ಕು	**389878948**

ಹೂಡಿಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:FD 38:TAR2018 27.08.2018, FD 08: TAR 2020 ದಿನಾಂಕ:12.03.2020ರಂತೆ ಮತ್ತು FD 91:TAR 2022, Dated: 02.07.2022ರಲ್ಲಿ ತಿಳಿಸಿರುವಂತೆ ಆನ್‌ಲೈನ್ ಮೂಲಕ ಬಡ್ಡಿದರಕ್ಕೆ ಟೆಂಡರ್ ಕರೆದು ಹೆಚ್ಚು ಬಡ್ಡಿ ನಮೂದಿಸಿದ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಮಾಡಲು ಕ್ರಮವಹಿಸುವುದು ಅಗತ್ಯವಾಗಿದೆ. ಅದರಂತೆ 2022–23ನೇ ಸಾಲಿನಲ್ಲಿ ಎರಡು ಬಾರಿ F-Procurement ಮೂಲಕ ಪ್ರಸ್ತಾವನೆ ಸಲ್ಲಿಸಲಾಗಿಯೂ ಸಹ ಯಾವುದೇ ಬ್ಯಾಂಕುಗಳು ಟೆಂಡರ್ ನಲ್ಲಿ ಭಾಗವಹಿಸಿರುವುದಿಲ್ಲ. ಆದ್ದರಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಬಡ್ಡಿದರವನ್ನು 03 ವಿವಿಧ ಬ್ಯಾಂಕ್‌ಗಳಿಂದ ಕೊಟೇಷನ್ ಮೂಲಕ ಪಡೆದು ತುಲನೆಮಾಡಿ ನಿಶ್ಚಿತ ಠೇವಣಿ ಮಾಡಿದೆ. ಇದರಿಂದ ಸ್ಪರ್ಧಾತ್ಮಕತೆ ಇಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಮೇಲೆ ತಿಳಿಸಿದ ಸರ್ಕಾರಿ ಆದೇಶದಂತೆ ನಿಶ್ಚಿತ ಠೇವಣಿ ಇರಿಸಲು ಕ್ರಮವಹಿಸಲು ತಿಳಿಸಿದೆ.

ಭಾಗ–3

24) ರಸೀದಿ ಪುಸ್ತಕದ ದಾಸ್ತಾನು ಮತ್ತು ವಿತರಣೆ ವಿವರಗಳು :–

ಸಂಸ್ಥೆಯಲ್ಲಿ ರಸೀದಿ ಪುಸ್ತಕಗಳ ದಾಸ್ತಾನುಗಳಿಗೆ ಸಂಬಂಧಿಸಿದಂತೆ ನಿಗಧಿತ ನಮೂನೆಯಲ್ಲಿ ರಸೀದಿ ದಾಸ್ತಾನು ಪುಸ್ತಕವನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳೆ ಸಂಪೂರ್ಣ ಜವಾಬ್ದಾರಾರರು. ವರದಿ ಸಾಲಿನಲ್ಲಿ ಸಂಸ್ಥೆಯಲ್ಲಿ ಲಭ್ಯವಿರುವ ರಸೀದಿ ಪುಸ್ತಕಗಳ ಆಧಾರದ ಮೇಲೆ ಹಾಗೂ ಹಿಂದಿನ ವರದಿಯಲ್ಲಿ ಉಲ್ಲೇಖಿಸಿರುವಂತೆ ರಸೀದಿ ಪುಸ್ತಕಗಳನ್ನು ಪರಿಶೀಲಿಸಿದೆ.

2022–23ನೇ ಸಾಲಿಗೆ

01.04.2022 ಕ್ಕೆ ಪ್ರಾರಂಭಿಕ ಶಿಲ್ಕು	16
2022–23ನೇ ಸಾಲಿನ ಸ್ವೀಕೃತಿ	–
ಒಟ್ಟು:	**16**
2022–23ನೇ ಸಾಲಿಗೆ ಉಪಯೋಗ	07
31–03–2023ಕ್ಕೆ ಅಂತಿಮ ಶಿಲ್ಕು	09

ಬಾಕಿಗೆ ವಿವರ :- ರಸೀದಿ ಸಂಖ್ಯೆ: – 28–36 (1351–1800)

25) ರಸೀದಿ ಪುಸ್ತಕ ಭಾಗಶಃ ಉಪಯೋಗಿಸಿರುವುದು :-

2022–23ನೇ ಸಾಲಿನಲ್ಲಿ ಭಾಗಶಃ ರಸೀದಿ ಪುಸ್ತಕ ಉಪಯೋಗಿಸಿದ್ದು, ವಿವರ ಕೆಳಕಂಡಂತಿದೆ

ಕ್ರ.ಸಂ	ರಸೀದಿ ಸಂಖ್ಯೆ	2022–23ನೇ ಸಾಲಿನಲ್ಲಿ ಉಪಯೋಗಿಸಿರುವ ಕೊನೆ ರಸೀದಿ	ದಿನಾಂಕ
1	27	1301–1305	31.03.2023

26) ಅಕ್ರಮ ಸಕ್ರಮ ಖಾತೆಯ ಅರ್ಜಿ ನಮೂನೆ ದಾಸ್ತಾನು ;-

ಲೆಕ್ಕ ತನಿಖೆ ಪ್ರಾರಂಭಿಕ ದಿನಾಂಕ: 22.11.2023ರಂದು ಪ್ರಸಕ್ತ ಸಾಲಿನ ಭೌತಿಕ ಪರಿಶೀಲನೆಯಲ್ಲಿ ವಿವರ ಈ ಕೆಳಕಂಡಂತಿರುತ್ತದೆ.

2022–23 ರವರೆಗೆ

01.04.2022ಕ್ಕೆ ಪ್ರಾರಂಭಿಕ ಶಿಲ್ಕು	99
2022–23ನೇ ಸಾಲಿನ ಸ್ವೀಕೃತಿ	–
ಒಟ್ಟು	**99**
2022–23ನೇ ಸಾಲಗೆ ಉಪಯೋಗ	–
31–3–2023ಕ್ಕೆ ಅಂತಿಮ ಶಿಲ್ಕು	99

27) ಪ್ರಾಧಿಕಾರಕ್ಕೆ ಮಂಜೂರಾಗಿರುವ ಹುದ್ದೆಗಳ ವಿವರಗಳು :-

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನಾ ಪ್ರಾಧಿಕಾರ ಬೆಂಗಳೂರು ಸಂಸ್ಥೆಯು ದಿ: 05.10.1999 ರಲ್ಲಿ ಅಸ್ಥಿತ್ವಕ್ಕೆ ಬಂದಿರುತ್ತದೆ. ಪ್ರಾಧಿಕಾರ ಪ್ರಥಮ ಸಭೆಯು ದಿನಾಂಕ: 25.01.2000ರಲ್ಲಿ ನಡೆದಿದ್ದು ವಿವಿಧ ಕಾರ್ಯ ಚಟುವಟಿಕೆಗಳ ಸ್ವರೂಪವನ್ನು ಜಾರಿಗೊಳಿಸಲು ತೀರ್ಮಾನಿಸಿ ಅಂಗೀಕರಿಸಲಾದ ನಡಾವಳಿಯನ್ನು ಪರಿಶೀಲಿಸಿದೆ. ಪ್ರಸಕ್ತ ಯೋಜನಾ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಸಂ.ನಅಇ/110/ನಯೋಸೆ/2010 ಬೆಂಗಳೂರು ದಿ: 30.07.2010 ಅನ್ವಯ ಕೆಳಕಂಡಂತೆ ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳನ್ನು ತಾತ್ಕಾಲಿಕವಾಗಿ ಮುಂದುವರಿಸಲಾದ ಒಟ್ಟು 8 ಹುದ್ದೆಗಳು ಮಂಜೂರು ಮಾಡಿದೆ. ಸದರಿ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ/286/ಅ.ಪ್ರಾ.2007 ದಿ: 30.05.2007 ರ ಆದೇಶದಲ್ಲಿ ನಮೂದಿಸಲಾದ ಷರತ್ತು ಮತ್ತು ನಿರ್ಭಂದನೆಗೊಳಪಟ್ಟು ದಿನಾಂಕ: 27.02.2011 ರಿಂದ ಪುನಃ ಒಂದು ವರ್ಷದ ಅವಧಿಗೆ ಅಥವಾ ಬೆಂಗಳೂರು ಪ್ರಾಧಿಕಾರದ ಕಾರ್ಯ ಮುಕ್ತಾಯವಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ. ನಂತರ ಸರ್ಕಾರಿ ಆದೇಶದ ಸಂಖ್ಯೆ: ನಅಇ/29 ನಯೋಸೇ 2012 ಬೆಂಗಳೂರು ದಿನಾಂಕ: 09.04.2012ರ ಆದೇಶದಂತೆ ಮತ್ತೆ ಒಂದು ವರ್ಷಕ್ಕೆ ದಿನಾಂಕ: 27.02.2012 ರಿಂದ ಮುಂದುವರಿಸಲಾಗಿದೆ. ಹಾಗೂ ಸರ್ಕಾರಿ ಆದೇಶದ ಸಂಖ್ಯೆ: ನಅಇ/52 ನಯೋಸೇ 2013 ದಿನಾಂಕ: 10.04.2013ರ ಆದೇಶದಂತೆ ದಿನಾಂಕ: 27.02.2013 ರಿಂದ ಮತ್ತೆ ಒಂದು ವರ್ಷಕ್ಕೆ ಮುಂದುವರಿಸಲಾಗಿದೆ. ನಂತರ ಸರ್ಕಾರದ ಆದೇಶ ಸಂಖ್ಯೆ:ನಅಇ 26 ನಯೋಸೇ 2016, ಬೆಂಗಳೂರು, ದಿನಾಂಕ:10.062016ರ ಆದೇಶದಂತೆ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ತಾತ್ಕಾಲಿಕವಾಗಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸೃಜಿಸಲಾಗಿರುವ 08 ತಾಂತ್ರಿಕ ಹುದ್ದೆಗಳನ್ನು ಮತ್ತು 18 ವಿವಿಧ ವೃಂದದ ಹುದ್ದೆಗಳನ್ನು ಕ್ರಮವಾಗಿ ದಿನಾಂಕ:27.02.2018 ರಿಂದ ಹಾಗೂ

ದಿನಾಂಕ:19.02.2018 ರಿಂದ ಎರಡು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಿದೆ. ಹುದ್ದೆಗಳ ತಾತ್ಕಾಲಿಕ ಮಂಜೂರಾತಿ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ಸೃಜಿಸಲಾಗಿರುವ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವವರ ಹುದ್ದೆ	ಹೆಚ್ಚುವರಿ
1	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು	01	1	–
2	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ಜಂಟಿ ನಿರ್ದೇಶಕರು	01	01	–
3	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	02	02	–
4	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	04	02	–
5	ನಗರ ಯೋಜಕರು	04	02	–
6	ಕಿರಿಯ/ಸಹಾಯಕ ನಗರ ಯೋಜಕರು	04	02	–
7	ಡ್ರಾಫ್ಟ್‌ಮೆನ್	02	–	–
8	ಪ್ರಥಮ ದರ್ಜೆ ಸಹಾಯಕರು	01	01	–
9	ಶೀಘ್ರಲಿಪಿಗಾರರು	01	00	–
10	ಬೆರಳಚ್ಚುಗಾರರು	01	01	–
11	ಡಿ ಗ್ರೂಪ್ ನೌಕರರು	03	03	–
12	ಲೆಕ್ಕ ಸಹಾಯಕರು	1	01	–
13	ಚಾಲಕರು	–	02	–
	ಒಟ್ಟು	**25**	**18**	

28) ಪಿಂಚಣಿ ವಂತಿಕೆಯನ್ನು ಜಮೆ ಮಾಡಿರುವ ವಿವರ :

ಕೆಸಿಎಸ್‌ಆರ್ ನಿಯಮ 427ರಂತೆ ಅನ್ಯ ಸೇವೆಯ ಮೇರೆಗೆ ಕರ್ತವಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಯನ್ನು ವೇತನದ 1/8 ಭಾಗದಂತೆ ಲೆಕ್ಕಾಚಾರ ಮಾಡಿ ದಿನಾಂಕ: 01.04.2022 ರಿಂದ 31.03.2023ರವರೆಗೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಪಿಂಚಣಿ ವಂತಿಕೆ ಒಟ್ಟಾರೆ ರೂ.

391236/–ಗಳನ್ನು (ಚೆಕ್ಕು ಸಂಖ್ಯೆ: 195697/29–07–2022) ರಾಜ್ಯ ಸಂಚಿತ ನಿಧಿಗೆ ಜಮಾ ಮಾಡಿದೆ ಮತ್ತು ಸದರಿ ನೌಕರರ ಶೇ. 11ರಂತೆ ರಜಾ ವೇತನ ಅಂಶದಾನವನ್ನು ಲೆಕ್ಕಾಚಾರ ಮಾಡಿ ರಜಾ ವೇತನ ಅಂಶದಾನ ಒಟ್ಟಾರೆ ರೂ. 678774/–ಗಳನ್ನು (ಚೆಕ್ಕು ಸಂಖ್ಯೆ: 195698/29-7-2022) ಪಾವತಿಸಲಾಗಿರುತ್ತದೆ.

29) ಸಂಗ್ರಹಣಾ ಶುಲ್ಕದಲ್ಲಿ ಶೇ.5ರ ಭಾಗವನ್ನು ಶುಲ್ಕದ ರೂಪದಲ್ಲಿ ಕರ್ನಾಟಕ ನಗರ ಯೋಜನಾ ಮಂಡಳಿ ವಂತಿಕೆ ನೀಡುವ ಕುರಿತು :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ನಿಯಮ (18)ರನ್ವಯ ಪ್ರಾಧಿಕಾರವು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಸಂಗ್ರಹಿಸಲಾದ ವಿನ್ಯಾಸ ಅನುಮೋದನೆ ಶುಲ್ಕ, ಭೂ ಉಪಯೋಗದ ಬದಲಾವಣೆ ಶುಲ್ಕ, ನಿವೇಶನ/ಕಟ್ಟಡ ಅನುಮೋದನೆ ಶುಲ್ಕ, ನಿವೇಶನ ಹಾಗೂ ಕಟ್ಟಡ ನಕ್ಷೆ ತಾಂತ್ರಿಕ ಪರಿಶೀಲನಾ ಶುಲ್ಕಗಳ ಮೇಲೆ ಶೇ.5ರಷ್ಟು ಶುಲ್ಕ ಭಾಗವನ್ನು ಕರ್ನಾಟಕ ನಗರ ಯೋಜನಾ ಮಂಡಳಿಗೆ ವಂತಿಕೆ ರೂಪದಲ್ಲಿ ನೀಡಬೇಕಾಗಿರುತ್ತದೆ. ಸದರಿ ಪ್ರಾಧಿಕಾರದಲ್ಲಿ 2022–23 ಸಾಲಿಗೆ ಹಿಂದಿನ ಸಾಲು 01.01.2021 ರಿಂದ 31.12.2022 ರವರೆಗಿನ ರೂ. 624399/–ಗಳನ್ನು ಕರ್ನಾಟಕ ನಗರ ಯೋಜನಾ ಮಂಡಳಿ ವಂತಿಕೆ ಪಾವತಿ ಮಾಡಿರುತ್ತಾರೆ. ದಿನಾಂಕ: 31.03.2023ರ ಅಂತ್ಯಕ್ಕೆ ಪ್ರಸಕ್ತ ಸಾಲು 2022–23ನೇ ಸಾಲಿನ ಮೊತ್ತ ರೂ.3062470/– ಗಳನ್ನು ಉಳಿಸಿಕೊಂಡಿದ್ದು, ಸದರಿ ಬಾಕಿ ಮೊತ್ತ ರೂ. 3062470/–ಗಳನ್ನು ಕರ್ನಾಟಕ ನಗರ ಯೋಜನಾ ಮಂಡಳಿ ವಂತಿಕೆ ಪಾವತಿ ಮಾಡಿ ವಿವರಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಣೆಗೆ ಸೂಚಿಸಲಾಗಿದೆ.

30.ಸೆಸ್ ಮೊತ್ತವನ್ನು ಸರ್ಕಾರಕ್ಕೆ ಪಾವತಿಸದಿರುವುದು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಾಲಂ 18ಎ ರನ್ವಯ ಹಾಗು ಈ ಕೆಳಕಂಡ ಉದ್ದೇಶಗಳಿಗೆ ಸೆಸ್‌ನ್ನು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ ನಿಯಮ 37–ಸಿ ರಡಿ ಅಧಿಸೂಚನೆ ಸಂಖ್ಯೆ: ಯುಡಿಡಿ/3/ಟಿಟಿಪಿ/2015 ದಿನಾಂಕ: 25.02.2020 ಮತ್ತು ಯುಡಿಡಿ/23/ಟಿಟಿಪಿ/2020(ಇ) ದಿನಾಂಕ:21.06.2021ರಲ್ಲಿ ನಿಗಧಿಪಡಿಸಿರುವ ದರಗಳಂತೆ ಪಾವತಿಸಿಕೊಳ್ಳಲಾಗಿರುತ್ತದೆ ವಸೂಲಾತಿ ವಿವರಣೆ ಈ ಕೆಳಗಿನಂತಿವೆ.

ಕ್ರ.ಸಂ.	ಸೆಸ್ಸುಗಳ ವಿವರಣೆ	2022–23 ನೇ ಸಾಲಿನಲ್ಲಿ ವಸೂಲಿಸಿರುವ ಮೊತ್ತ	ಶೇ 5 ರಂತೆ ಸಂಗ್ರಹಣ ಶುಲ್ಕ	ಪಾವತಿಸಬೇಕಾಗಿರುವ ಮೊತ್ತ
1	ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ	3054550	152728	2901822
2	ವರ್ತುಲ ರಸ್ತೆ ಅಭಿವೃದ್ಧಿ	3054550	152728	2901822
3	ಸಮೂಹ ಸಾರಿಗೆ ವ್ಯವಸ್ಥೆ ಅಭಿವೃದ್ಧಿ	6188450	309423	5879027
ಒಟ್ಟು		**12297550**	**614879**	**11682671**

ಪ್ರಸಕ್ತ ವರ್ಷದಲ್ಲಿ ವಸೂಲಿಸಿದ ಮೊತ್ತ ರೂ. **12297550**/– ಗಳಲ್ಲಿ ಶೇಕಡಾ 5 ಸಂಗ್ರಹಣಾ ಶುಲ್ಕು ಮೊತ್ತ ರೂ. **614879**/–ಗಳನ್ನು ಹೊರತುಪಡಿಸಿ ಬಾಕಿ ಮೊತ್ತ ರೂ.**11682671**/–ವನ್ನು ಸರ್ಕಾರದ ಸುತ್ತೋಲೆ/ಆದೇಶದನ್ವಯ ಆಯಾ ಇಲಾಖೆಗಳ ಲೆಕ್ಕ ಶೀರ್ಷಿಕೆಗೆ ಪಾವತಿಸಲು ಕ್ರಮ ವಹಿಸುವುದು.

ಮುಂದುವರೆದು, ಸರ್ಕಾರದ ಸುತ್ತೋಲೆ/ಆದೇಶದನ್ವಯ ಪಾವತಿಯ ಸಮಯದಲ್ಲಿ ಹಿಂದಿನ ಸಾಲುಗಳ ಸೆಸ್ ಮೊತ್ತವನ್ನು ಸಹ ಪಾವತಿಸಲು ಕ್ರಮ ವಹಿಸಿವುದು ಎಂದು ವರದಿ ತಿಳಿಸಿದೆ.

31) ಕಛೇರಿ ಬಾಡಿಗೆ ಪಾವತಿ ವಿವರ :-

ಪ್ರಾಧಿಕಾರವು ತನ್ನ ಸ್ವಂತ ನಿವೇಶನ ಹಾಗೂ ಕಟ್ಟಡ ಹೊಂದಿಲ್ಲದ ಕಾರಣ ಪ್ರಸ್ತುತ ವಿಳಾಸದಲ್ಲಿ ಇರುವ ಖಾಸಗಿ ಕಟ್ಟಡದಲ್ಲಿ ಮಾಸಿಕ ಬಾಡಿಗೆ ಆಧಾರದ ಮೇಲೆ ಕಚೇರಿ ಕೆಲಸ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಸದರಿ ಸಾಲಿನಲ್ಲಿ ಕಛೇರಿ ಬಾಡಿಗೆಗೆ ಸಂಬಂಧಿಸಿದಂತೆ ಒಟ್ಟಾರೆ ರೂ. **3016839**/-ಗಳನ್ನು ಪಾವತಿಸಿದ್ದು, ಇದರ ಸಂಬಂಧ ಜಿ.ಎಸ್.ಟಿ ಪಾವತಿ ಹಾಗೂ ಟಿ.ಡಿ.ಎಸ್ ಪಾವತಿ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುತ್ತಾರೆ. ಕಟ್ಟಡ ಮಾಲೀಕರಿಗೆ ಕಛೇರಿ ಪ್ರಾರಂಭದಲ್ಲಿ ರೂ. 10,00,000/-ಗಳ ಠೇವಣಿ ಮೊತ್ತವೆಂದು ಪಾವತಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

32) ಸ್ಥಿರ-ಚರಾಸ್ತಿ ವಹಿ ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದು :-

ಪ್ರಾಧಿಕಾರವು ಸ್ಥಿರ ಮತ್ತು ಚಿರಾಸ್ತಿಗಳ ವಹಿಯನ್ನು ನಿರ್ವಹಿಸಿ ದೃಢೀಕರಿಸಿರುತ್ತಾರೆ. ಆದರೆ ಮೌಲ್ಯವನ್ನು ದಾಖಲಿಸಿರುವುದಿಲ್ಲ. ಅಗತ್ಯ ಕ್ರಮ ಕೈಗೊಂಡು ವಾರ್ಷಿಕ ಲೆಕ್ಕಗಳಲ್ಲಿ ಸದರಿ ಮೌಲ್ಯವನ್ನು ದಾಖಲಿಸಲು ಕ್ರಮವಹಿಸುವುದು ಅಗತ್ಯವಾಗಿದೆ.

33) ಪ್ರಾಧಿಕಾರದ ಖಾತೆಯಲ್ಲಿ ಹೆಚ್ಚಿನ ಮೊತ್ತ ಉಳಿತಾಯ ಖಾತೆಯಲ್ಲಿರುವ ಬಗ್ಗೆ:-

ಪ್ರಾಧಿಕರದ 2022-23ನೇ ಸಾಲಿನ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿದಾಗ ಬ್ಯಾಂಕ್ ಖಾತೆಗಳಲ್ಲಿ ಹೆಚ್ಚಿನ ಮೊತ್ತದಲ್ಲಿ ಪ್ರಾರಂಭಿಕ ಶಿಲ್ಕು ರೂ. 119904025/- ಗಳಿರುವುದು ಕಂಡುಬಂದಿದೆ. ವರ್ಷದ ಮುಕ್ತಾಯದಲ್ಲಿ ರೂ. 41254743/- ಗಳು ಇರುವುದು ಕಂಡುಬಂದಿದೆ. ಸದರಿ ವರ್ಷದ ಅವಧಿಯಲ್ಲಿ ನೈಜ ಸ್ವೀಕೃತಿಯೆಂದು ರೂ.103200008/- ಗಳು ಸ್ವಿಕೃತವಾಗಿದ್ದು, ಸದರಿ ಅವಧಿಯಲ್ಲಿ ರೂ. 24636392/- ಗಳು ವೆಚ್ಚವಾಗಿರುತ್ತದೆ. ಮೇಲಿನ ಅಂಶವನ್ನು ಪರಿಶೀಲಿಸಿದಾಗ ಯಾವುದೇ ರೀತಿಯ ನಿರೀಕ್ಷಿತ ವೆಚ್ಚಗಳು ಇಲ್ಲದಿದ್ದರೂ, ಮೊತ್ತವನ್ನು ಬ್ಯಾಂಕ್ ಉಳಿತಾಯ ಖಾತೆಯಲ್ಲಿಯೇ ಉಳಿಸಿಕೊಂಡಿದ್ದು, ನಿಶ್ಚಿತ ಠೇವಣಿಯಲ್ಲಿ ಉಳಿತಾಯ ಮಾಡದಿರುವುದು ಕಂಡುಬರುತ್ತದೆ. ಇದರಿಂದ ಪ್ರಾಧಿಕಾರಕ್ಕೆ ಬರಬಹುದಾದ ಹೆಚ್ಚಿನ ಬಡ್ಡಿ ಮೊತ್ತ ನಷ್ಟವಾಗಿರುವುದು ಕಂಡುಬರುತ್ತದೆ. ಅಗತ್ಯ ಕ್ರಮ ಕೈಗೊಂಡು ಫ್ಲೆಕ್ಸಿ ಖಾತೆಗಳನ್ನು ನಿರ್ವಹಿಸಲು ಕ್ರಮವಹಿಸುವುದು ಸೂಕ್ತವೆಂದು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ.

34. ಅನಧಿಕೃತ ಬಡಾವಣೆಗಳ ತೆರವುಗೊಳಿಸಲು ಪ್ರಾಧಿಕಾರ ಕೈಗೊಂಡಿರುವ ಕ್ರಮದ ವಿವರ:-

2022-23ನೇ ಸಾಲಿನ ವರೆಗೆ ಸದರಿ ಪ್ರಾಧಿಕಾರದ ಮಿತಿಯಲ್ಲಿ ಎಷ್ಟು ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿದ್ದವು, ಈ ಅನಾಧಿಕೃತ ಬಡಾವಣೆಗಳನ್ನು ತೆರವುಗೊಳಿಸಲು ಪ್ರಾಧಿಕಾರವು ಕೈಗೊಂಡಿರುವ ಕ್ರಮಗಳನ್ನು ಹಾಗು 31.03.2023ರ ವರೆಗೆ ತೆರವುಗೊಳಿಸಿದ ಅನಧಿಕೃತ ಬಡಾವಣೆಗಳ ವಿವರಗಳನ್ನು ಪ್ರಾಧಿಕಾರವು ಲೆಕ್ಕ ತನಿಖೆಗೆ ವಿವರಗಳನ್ನು ನೀಡಿರುವುದಿಲ್ಲ. ಪ್ರಾಧಿಕಾರಕ್ಕೆ ಬೆಂಗಳೂರಿನಿಂದ ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು ಶ್ರೀರಂಗಪಟ್ಟಣ, ಮಂಡ್ಯ ಹಾಗು ಮೈಸೂರಿನ ಭಾಗಗಳು ಸೇರಿರುವುದರಿಂದ ಸ್ಥಳೀಯವಾಗಿ ಮೆಲ್ವೀಚಾರಣೆ ಹಾಗು ವಿಚಕ್ಷಣೆ ನಡೆಸಲು ಸ್ಥಳೀಯ ಕಛೇರಿಗಳು ಇಲ್ಲದಿರುವುದರಿಂದ ಅನಧಿಕೃತ ಬಡಾವಣೆಗಳು ತಲೆ ಎತ್ತುವ ಸಂಭವವಿರುವುದರಿಂದ ಅನಧಿಕೃತ ಬಡಾವಣೆಗಳಿಂದ ವ್ಯವಸ್ಥಿತವಾದ ಮುಲಭೂತ ಸೌಕರ್ಯಗಳು ಇಲ್ಲದೆ ನಾಗರೀಕರಿಗೆ ಅನಾನುಕೂಲವಾಗುತ್ತದೆ. ಅಲ್ಲದೆ ಸರ್ಕಾರಕ್ಕೆ ತೆರಿಗೆ ನಷ್ಟವಾಗುವ ಸಂಭವವಿರುವುದರಿಂದ ಮೇಲಿನ ವಿಷಯದ ಬಗ್ಗೆ ತೀವ್ರ ಗಮನವಹಿಸಲು ಹಾಗು ಆಡಳಿತಾತ್ಮಕ ಕ್ರಮವಹಿಸಲು ಲೆಕ್ಕ ತನಿಖೆಯು ಅಭಿಪ್ರಾಯಿಸಿದೆ.

35. 2022–23ನೇ ಸಾಲಿನಲ್ಲಿ ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ಯೋಜನಾ ಪ್ರಾದೀಕಾರದ ಕಛೇರಿಯಲ್ಲಿ ವಿವಿಧ ನಮೂನೆಗಳ ಸಂಬಂಧ ಸ್ವೀಕೃತಿಯಾದ ಮತ್ತು ವಿಲೇವಾರಿಯಾದ ಅರ್ಜಿಗಳ ವಿವರ:–

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ಕಛೇರಿಯಲ್ಲಿ ವಿವಿಧ ನಮೂನೆಗಳ ಸಂಬಂಧ 2022–23 ನೇ ಸಾಲಿನಲ್ಲಿ ಸ್ವೀಕೃತಿಯಾದ ಮತ್ತು ವಿಲೇವಾರಿಯಾದ ಅರ್ಜಿಗಳ ವಿವರಗಳನ್ನು ಒಳಗೊಂಡ ವಹಿಯನ್ನು ನಿರ್ವಹಿಸಲಾಗಿದೆ. ಈ ಕೆಳಕಂಡ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿದೆ.

i) ಭೂ ಪರಿವರ್ತನೆ ಪ್ರಕರಣಗಳು:

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಜಮೀನುಗಳ ಭೂಪರಿವರ್ತನೆ ಬಗ್ಗೆ ಅಭಿಪ್ರಾಯ ನೀಡಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ವಲಯ ನಿಯಮಾವಳಿಗಳಂತೆ ಪರಿಶೀಲಿಸಿ, ಭೂಪರಿವರ್ತನೆಗೆ ಅಭಿಪ್ರಾಯಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕರ್ನಾಟಕ ಇಲಾಖೆಯಿಂದ ಈ ಪ್ರಾಧಿಕಾರದಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂಪರಿವರ್ತನೆ ಮಾಡುವ ಬಗ್ಗೆ 607 ಪ್ರಕರಣಗಳನ್ನು ಸ್ವೀಕರಿಸಿದ್ದು, ಅವುಗಳಿಗೆ ಈ ಪ್ರಾಧಿಕಾರದಿಂದ ಅಭಿಪ್ರಾಯ ನೀಡಲಾಗಿದೆ.

ii) ವಿನ್ಯಾಸ ಅನುಮೋದನೆ ಪ್ರಕರಣಗಳು:–

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ವ್ಯಾಪ್ತಿಯೊಳಗೆ ಬರುವ ಭೂಪರಿವರ್ತಿತ ಜಮೀನುಗಳಲ್ಲಿ ಉದ್ದೇಶಿತ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಯನ್ವಯ ಪ್ರಾಧಿಕಾರದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು, ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17ರಂತೆ ತಾತ್ಕಾಲಿಕ ಅನುಮೋದನೆ ನೀಡಲಾಗುತ್ತಿದೆ. ಸರ್ಕಾರದಿಂದ ಕಾಲಕಾಲಕ್ಕೆ ಜಾರಿಗೊಳಿಸಲಾದ ಆದೇಶ/ಸುತ್ತೋಲೆಗಳನ್ವಯ ವಸತಿ ಬಡಾವಣೆ ಮಾಲೀಕರು ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ ರಸ್ತೆ, ಸಿಡಿ ವರ್ಕ್ಸ್ ಹಾಗೂ ಚರಂಡಿ ಕೆಲಸಗಳು, ಉದ್ಯಾನವನ/ಬಯಲುಜಾಗ/ನಾಗರೀಕ ಸೌಲಭ್ಯದ ನಿವೇಶನ ಮತ್ತು ರಸ್ತೆಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ, ಅರ್ಜಿದಾರರು ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಸಂಬಂಧ ಸಂಬಂಧಪಟ್ಟ ಇಲಾಖೆಗಳಿಂದ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಪ್ರಾಧಿಕಾರಕ್ಕೆ ಹಾಜರುಪಡಿಸಿ ವಿನ್ಯಾಸದಲ್ಲಿನ ಶೇ.100 ರಷ್ಟು ನಿವೇಶಗಳ ಬಿಡುಗಡೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ನಂತರ ಪ್ರಾಧಿಕಾರದಿಂದ ಸದರಿ ವಿನ್ಯಾಸವನ್ನು ಅನುಮೋದಿತ ನಕ್ಷೆಯಂತೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಬಗ್ಗೆ ಪರಿವೀಕ್ಷಣೆ ಕೈಗೊಂಡು ಖಚಿತಪಡಿಸಿಕೊಂಡ ನಂತರ ಶೇ. 100 ರಷ್ಟು ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ 20 ಬಹುನಿವೇಶನ ವಿನ್ಯಾಸಗಳಿಗೆ, 26 ಏಕ ನಿವೇಶನ ವಿನ್ಯಾಸಗಳಿಗೆ

ಒಟ್ಟು 46 ವಿನ್ಯಾಸಗಳಿಗೆ ಅನುಮೋದನೆ ನೀಡಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ.

iii) ಪ್ರಾರಂಭಿಕ ಪ್ರಮಾಣ ಪತ್ರ ಪ್ರಕರಣಗಳು.:–

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲು ಉದ್ದೇಶಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15ರಂತೆ ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಸಲ್ಲಿಸಿದ ಅರ್ಜಿಗಳನ್ನು ಅನುಮೋದಿತ ವಲಯ ನಿಯಮಾವಳಿಯಂತೆ ತಾಂತ್ರಿಕವಾಗಿ ಪರಿಶೀಲಿಸಿ, ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ 95 ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

iv) ಭೂ ಉಪಯೋಗ ಬದಲಾವಣೆ ಪ್ರಕರಣಗಳು:

ಕಾನೂನು ರೀತ್ಯಾ ಭೂಮಾಲೀಕರು, ಮಹಾಯೋಜನಾ ನಕ್ಷೆಯಲ್ಲಿರುವ ನಿಗಧಿತ ಭೂಉಪಯೋಗದ ಬದಲಿಗೆ ಹೊಸದಾಗಿ ಬೇರೆ ಉದ್ದೇಶಕ್ಕಾಗಿ ಜಮೀನನ್ನು ಅಭಿವೃದ್ಧಿಪಡಿಸಲು ಆಪೇಕ್ಷಿಸಿ, ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಭೂಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಲಾಗುತ್ತಿದೆ. ಅರ್ಜಿಯನ್ನು ದಾಖಲಾತಿಗಳೊಂದಿಗೆ ಸರ್ಕಾರ ಜಾರಿಗೊಳಿಸಲಾದ ಮಾರ್ಗಸೂಚಿಯನ್ವಯ, ಬದಲಾವಣೆ ಬಯಸುವ ಯೋಜನೆಗೆ ಯೋಗ್ಯ ಎಂದು ಭಾವಿಸಿದ್ದಲ್ಲಿ ಮತ್ತು ಅದರಲ್ಲಿ ಸಾರ್ವಜನಿಕ ಹಿತಾಸಕ್ತಿ ಇದ್ದು, ಯಾವುದೇ ನಿಯಮಗಳಿಗೆ ವ್ಯತಿರಿಕ್ತ ಇಲ್ಲದಿದ್ದ ಪಕ್ಷದಲ್ಲಿ, ಸ್ಥಳೀಯ ಪತ್ರಿಕೆಯಲ್ಲಿ ಈ ಕುರಿತು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಣೆ ನೀಡಿ, (ಕನಿಷ್ಟ 15 ದಿನಗಳ ಕಾಲಾವಕಾಶ ನೀಡಿ) ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತದೆ. ಸಾರ್ವಜನಿಕರಿಂದ ಆಕ್ಷೇಪಣೆಗಳು ಸ್ವೀಕರಿಸಿದ್ದಲ್ಲಿ, ಅವುಗಳನ್ನು ಪರಿಶೀಲಿಸಿ ಭೂಉಪಯೋಗ ಬದಲಾವಣೆಗಳ ಕುರಿತು ಪ್ರಾಧಿಕಾರದ ಸಭೆಯಲ್ಲಿ ವಿಮರ್ಶಿಸಿ, ಠರಾವನ್ನು ದಾಖಲಿಸಿ, ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ ಅಥವಾ ಮಾಡದೇ ಇರುವ ಬಗ್ಗೆ ಸೂಕ್ತ ಕಾರಣವನ್ನು ನೀಡಿ ನಿರ್ಣಯಿಸಲಾಗುತ್ತಿದೆ. ಪ್ರಾಧಿಕಾರದ ಸಭೆಯಲ್ಲಿ ಭೂಉಪಯೋಗ ಬದಲಾವಣೆ ಶಿಫಾರಸ್ಸು ಮಾಡಿರುವ ಪ್ರಕರಣಗಳು ಸರ್ಕಾರದ ಮಂಜೂರಾತಿಗಾಗಿ ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುವುದು. ಪ್ರಸ್ತುತ ಸಾಲಿನಲ್ಲಿ ಒಟ್ಟು 52 ಭೂಉಪಯೋಗ ಬದಲಾವಣೆ ಪ್ರಸ್ತಾವನೆಗಳಿಗೆ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಪ್ರಸ್ತುತ ಸಾಲಿನಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 69(2)ರನ್ವಯ ಒಟ್ಟು 21 ಭೂ ಉಪಯೋಗ ನಿಗಧಿ ಪ್ರಕರಣಗಳಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿದೆ. ಖಾಸಗಿ ಲೇಔಟ್ ವಿನ್ಯಾಸದ ನಕ್ಷೆ ಮಂಜೂರಾತಿಗೆ ಸಂಬಂಧಿಸಿದಂತೆ ಪೂರಕವಾಗಿ ಕಡತಗಳನ್ನು ಹಾಜರುಪಡಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕಚಾರವನ್ನು ಮಾತ್ರ ಪರಿಶೀಲಿಸಲಾಗಿ ಮಹಾಯೋಜನೆಯ ಅನುಮೋದನೆಯು ತಾಂತ್ರಿಕ ಮಂಜೂರಾತಿಗೆ ಸಂಬಂಧಿಸಿದ್ದರಿಂದ ಪರಿಶೀಲಿಸಿರುವುದಿಲ್ಲ ಹಾಗೂ ಬಡಾವಣೆಗಳ ಹಸಿರು ವಲಯ ಹಾಗು ಹಳದಿ ವಲಯಗಳನ್ನು ನಿಖರವಾಗಿ ಅಂದಾಜಿಸಲು ಸಾಧ್ಯವಾಗಿರುವುದಿಲ್ಲ. ಹಸಿರು ವಲಯದಲ್ಲಿ ನಕ್ಷೆ ಮಂಜೂರಾತಿಯೇನಾದರು ನೀಡಿದ್ದರೆ ಸದರಿ ಸದಸ್ಯ ಕಾರ್ಯದರ್ಶಿಗಳೇ ನೇರ ಹೊಣೆಗಾರರಾಗುವರು ಎಂದು ವರದಿ ಅಭಿಪ್ರಾಯಿಸಿದೆ.

36. ಬಿ.ಎಂ.ಪಿ.ಸಿ.ಪಿ.ಎ ಸಂಸ್ಥೆಯ ಕಾರ್ಯದ ವಿವರ:–

ಸದರಿ ಸಂಸ್ಥೆಯ ಮಾಸ್ಟರ್‌ಪ್ಲಾನ್ 2021ರ ವರೆಗೆ ಜಾರಿಯಾಗಿರುತ್ತದೆ. ಈ ಮಾಸ್ಟರ್‌ಪ್ಲಾನ್‌ನಂತೆ ಸಂಸ್ಥೆಯು ಕಾರ್ಯನಿರ್ವಹಿಸುತ್ತಿಲ್ಲ. ಲೋಕೊಪಯೋಗಿ ಇಲಾಖೆಯಿಂದ ಮೂಲ ಮಹಾನಕ್ಷೆ ಪಡೆಯಲು ಪ್ರಾಧಿಕಾರದಿಂದ

ಹಲವಾರು ಪತ್ರ ವ್ಯವಹಾರವನ್ನು ನಡೆಸಿದ್ದರೂ ಸಹ ಮಂಜೂರಾಗಿರುವುದು ಕಂಡುಬರುವುದಿಲ್ಲ. ಇದರಿಂದ ಸಂಸ್ಥೆಯ ಮೂಲ ಉದ್ದೇಶವೇ ಪೂರ್ಣಗೊಂಡಂತೆ ಕಾಣುವುದಿಲ್ಲ. ಸದರಿ ಪ್ರಾಧಿಕಾರ ರಚನೆಗೆ ಕಾರಣವಾದ (ಮಹಾ ನಕ್ಷೆಯಲ್ಲಿ ತೋರಿಸಿರುವಂತೆ) ನೈಸ್ ರಸ್ತೆ ಯೋಜನೆಯು ಕೂಡ ನಡೆದಿರುವುದಿಲ್ಲ. ಪ್ರಾಧಿಕಾರದ ಯೋಜನಾ ಪ್ರದೇಶ, ಪ್ರಸ್ತಾಪಿತ ನೈಸ್ ರಸ್ತೆಯ ಅನುಪಾನು ಬರುವುದರಿಂದ ಲೋಕೊಪಯೋಗಿ ಇಲಾಖೆಯು ರಸ್ತೆ ಚಾಲನೆ ಹಾಗೂ ಪ್ರೈಮ್ ವರ್ಕ್ ಇಲ್ಲದೆ, ಯೋಜನಾ ವಿಳಂಬದಿಂದಾಗಿ ಪ್ರಾಧಿಕಾರದ ಉದ್ದೇಶಿತ ಗುರಿಗಳು ಪೂರ್ಣವಾದಂತೆ ಕಾಣುವುದಿಲ್ಲ. ಅಲ್ಲದೆ ಈಗಿರುವ ಮಹಾನಕ್ಷೆ ಜಾರಿಯಾಗಿ ಹಲವಾರು ವರ್ಷಗಳು ಕಳೆದಿದ್ದು, ಮಹಾನಕ್ಷೆಯಿಂದ ಹೆಚ್ಚಿನ ಅಂಶದಲ್ಲಿ, K.T.C.P ಕಾಯ್ದೆ 14(1)ರ ಅನ್ವಯ ಪ್ರಾಧಿಕಾರ ಪ್ರದೇಶ ವ್ಯಾಪ್ತಿಯಲ್ಲಿ ಭೂ ಬದಲಾವಣೆ ಕಾರ್ಯ ನಡೆಯುತ್ತಿರುವುದು ಕಂಡು ಬರುತ್ತದೆ.

37.ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಸಿ.ಎ ನಿವೇಶನ ವಿವರ:–

2022–23ನೇ ಸಾಲಿನಲ್ಲಿ ಯೋಜನಾ ಪ್ರಾಧಿಕಾರದ ವತಿಯಿಂದ ಅನುಮೋದನೆಗೊಂಡಿರುವ ವಿವಿಧ ಬಡಾವಣೆಗಳ ವಿವರಗಳು ಹಾಗೂ ಅನುಮೋದಿತ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಜಾಗಗಳಾದ ರಸ್ತೆ/ಚರಂಡಿ/ಪಾರ್ಕ್/ಆಸ್ಪತ್ರೆ/ಆಟದ ಮೈದಾನ ಹಾಗೂ ಸಿ.ಎ. ನಿವೇಶನಗಳನ್ನು ಪ್ರಾಧಿಕಾರದ ಹೆಸರಿಗೆ ಉಪ ನೊಂದಣಾಧಿಕಾರಿಗಳ ಕಛೇರಿಯಿಂದ ನೊಂದಣಿ ಮಾಡಿಸಿರುವ ವಿವರವನ್ನು ಒಳಗೊಂಡಂತೆ ದೃಢೀಕೃತ ವಹಿಯನ್ನು ಹಾಜರುಪಡಿಸುವಂತೆ ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:03/2023–24 ದಿನಾಂಕ: 24.11.2023ರಂದು ಜಾರಿಮಾಡಿಕೋರಲಾಗಿತ್ತು. ಈ ಸಂಬಂಧ ಯೋಜನಾ ಪ್ರಾಧಿಕಾರದಿಂದ 2022–23ನೇ ಸಾಲಿನಲ್ಲಿ ಅನುಮೋದಿಸಿದ ವಿವಿಧ ಬಡಾವಣೆಗಳ ನಕ್ಷೆ ಮಂಜೂರಾತಿ, ನಾಗರಿಕ ಸೌಲಭ್ಯ ಉದ್ಯಾನವನದ ಜಾಗಗಳನ್ನು ಪ್ರಾಧಿಕಾರದವರು ಪಡೆದಿರುತ್ತಾರೆ. ಈ ಬಗ್ಗೆ ವಿವರವನ್ನು ಅನುಬಂಧ–04ರಲ್ಲಿ ನೀಡಲಾಗಿದೆ.

38) 2022–23 ನೇ ಸಾಲಿನಲ್ಲಿ ಪ್ರಾಧಿಕಾರಕ್ಕೆ ವಹಿಸಿಕೊಳ್ಳಲಾದ ಸಿ.ಎ.ನಿವೇಶನಗಳ ವಹಿಯಲ್ಲಿ ಮಾರುಕಟ್ಟೆ ಮೌಲ್ಯ ನಮೂದಿಸಿ ದೃಢೀಕರಿಸದಿರುವುದು:–

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಈವರೆವಿಗೆ ಎಷ್ಟು ಸಿ.ಎ (ಅ.ಂ) ನಿವೇಶನಗಳನ್ನು ಪಡೆಯಲಾಗಿದೆ. ಪಾರ್ಕ್, ರಸ್ತೆ, ಸದರಿ ಸಿಎ ನಿವೇಶನಗಳಿಗೆ ಪ್ರಸ್ತುತ ಮಾರುಕಟ್ಟೆ ದರಗಳನ್ನು ದಾಖಲಿಸಿ (ವಹಿಯಲ್ಲಿ) ದೃಢೀಕರಿಸಿ ಲೆಕ್ಕ ತನಿಖೆಗೆ ಹಾಜರು ಪಡಿಸುವಂತೆ ವಿಚಾರಣೆ ಸಂಖ್ಯೆ:04 ದಿನಾಂಕ: 06.08.2022ರಂದು ಜಾರಿಮಾಡಲಾಗಿದ್ದು, ಸದರಿ ವಿಚಾರಣೆಗೆ ಮಾನ್ಯ ಸದಸ್ಯ ಕಾರ್ಯದರ್ಶಿಗಳು ವಿವರಗಳನ್ನು ಹಾಜರುಪಡಿಸಿದ್ದು, ಪರಿಶೀಲಿಸಲಾಗಿ ಸಿ.ಎ. ನಿವೇಶನಗಳ ವಹಿಯಲ್ಲಿ ಎಲ್ಲಾ ವಿವರಗಳನ್ನು ದಾಖಲಿಸಿರುವುದು ಕಂಡುಬರುತ್ತದೆ. ಆದರೆ ಮಾರುಕಟ್ಟೆ ದರವನ್ನು ನಮೂದಿಸಿ, ವರ್ಷಾಂತ್ಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ದೃಢೀಕರಿಸಿರುವುದಿಲ್ಲ. ಕೇವಲ 2022–23ನೇ ಸಾಲಿನ ವಿವರಗಳನ್ನು ಮಾತ್ರ ಹಾಜರುಪಡಿಸಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸಿ.ಎ ನಿವೇಶನಗಳ ಎಲ್ಲಾ ವಿವರಗಳನ್ನು ಮೌಲ್ಯದೊಂದಿಗೆ ವಹಿಯಲ್ಲಿ ದಾಖಲಿಸಿ ದೃಢೀಕರಿಸಿ ಲೆಕ್ಕಪತ್ರಗಳಲ್ಲಿ ನಮೂದಿಸಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ. 2022–23ನೇ ಸಾಲಿನ ವಿವರವನ್ನು ಅನುಬಂಧ–05ರಲ್ಲಿ ನೀಡಲಾಗಿದೆ.

39) ಪ್ರಾಧಿಕಾರದ ಪ್ರದೇಶ ವ್ಯಾಪ್ತಿಯಲ್ಲಿ ಉದ್ಯಾನವನ ಹಾಗೂ ಓಪನ್ ಸ್ಪೇಸ್ ಉದ್ದೇಶಗಳಿಗೆ ಕಾಯ್ದಿರಿಸಿದರ ಜಾಗದ ಭೂಸ್ವಾಧೀನ ಬಗ್ಗೆ:–

ಮಹಾನಕ್ಷೆ (ಮಾಸ್ಟರ್ ಪ್ಲಾನ್) ನಮೂದಿಸಿರುವಂತೆ ಪ್ರಾಧಿಕಾರದ ಯೋಜನಾ ಪ್ರದೇಶದಲ್ಲಿ ಕಾಯ್ದಿರಿಸಿರುವ **ಉದ್ಯಾನವನ ಹಾಗೂ ಓಪನ್ ಸ್ಪೇಸ್** ಜಾಗಗಳನ್ನು ಪಡೆಯಲು ಭೂ ಸ್ವಾಧೀನ ಕ್ರಮ

